**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**

**ಕೊಡಗು – ಮಡಿಕೇರಿ**

**ಸೆಷನ್ ಕೇಸ್ ಸಂಖ್ಯೆ: 23/2023**

**ಫಿರ್ಯಾದುದಾರರು:** ರಾಜ್ಯ ಸರ್ಕಾರದ ಪರವಾಗಿ,
ಸಿದ್ದಾಪುರ ಪೊಲೀಸ್ ಠಾಣೆ.

**ವಿರುದ್ಧ**

**ಆರೋಪಿತರು:** 1. ಪ್ರಭುಶೇಖರ ಬಿ.ವೈ
ತಂದೆಃ ಯಂಕಪ್ಪ
ಪ್ರಾಯಃ 55 ವರ್ಷ,
ವೃತ್ತಿಃ ರಾಜಿಕೀಯ ,
ವಾಸಃ ಅರೆಕಾಡು ಗ್ರಾಮ,
ಮಡಿಕೇರಿ ತಾಲ್ಲೂಕು,
ಕೊಡಗು ಜಿಲ್ಲೆ.

**ದಂಡ ಪ್ರಕಿಯಾ ಸಂಹಿತೆ ಕಲಂ 313 ರಡಿಯಲ್ಲಿ**

**ಆರೋಪಿ ಹೇಳಿಕೆ**

**ಪ್ರಃ 1** –ಅಭಿಯೋಜಕರ ಪರ ಸಾಕ್ಷಿದಾರರು ನ್ಯಾಯಾಲಯದಲ್ಲಿ ನುಡಿದ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದೀರಾ?

ಉಃ ಕೇಳಿಸಿಕೊಂಡಿದ್ದೇನೆ.

**ಪ್ರಃ 2** –ಪ್ರಾಸಾ–1 ಯಶೋಧರ ಡಿ.ಬಿ. ತನ್ನ ಸಾಕ್ಷ್ಯದಲ್ಲಿ ಚಾಸಾ–2 ರಿಂದ ಚಾಸಾ–8 ತನ್ನ ಊರಿನವರು. ಆರೋಪಿಗಳು ಸಹ ತಮ್ಮದೆ ಊರಿನವರು. ತಾನು ಮಡಿಕೇರಿ ತಾಲ್ಲೂಕು

ಬ್ಲಾಕ್ ಕಾಂಗ್ರೇಸಿನ ಕಾರ್ಯದರ್ಶಿಯಾಗಿದ್ದು, ಆರೋಪಿಗಳು ಬಿಜೆಪಿ ಪಕ್ಷಕ್ಕೆ ಸೇರಿದರು. ತನಗೂ ಹಾಗೂ ಆರೋಪಿತರಿಗೂ ರಾಜಕೀಯ ವೈಶಮ್ಯ ಇದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 3** –ಫ್ರಾಸಾ–1 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 28–09–2022 ರಂದು ತಾನು ಚಾಸಾ–2 ಅರೆಕಾಡು ಕಾಲೋನಿಯಲ್ಲಿ ಸಾವಿನ ಮನೆಗೆ ಹೋಗಲು ತನ್ನ ಜೀಪಾದ KA–31–M–0210 ನಲ್ಲಿ ಹೊರಟು ಕಲ್ಲುಬಂಗಲೆಯಲ್ಲಿ ಇರುವ ಚಾಸಾ–5 ರವರ ಹೋಟೆಲಿಗೆ ಚಹ ಕುಡಿಯಲು ಹೋಗಿದ್ದೆನು. ಹೋಟೆಲಿನ ಒಳಗೆ ಬಾಗಿಲಿನ ಪಕ್ಕದಲ್ಲಿ ಬೆಂಚಿನಲ್ಲಿ ಕುಳಿತುಕೊಂಡಿದ್ದಾಗ ಬೆಳಿಗ್ಗೆ ಸುಮಾರು 9.00 ಗಂಟೆ ಸಮಯಕ್ಕೆ ಆರೋಪಿತರು ಅಲ್ಲಿಗೆ ಬಂದರು. 1ನೇ ಆರೋಪಿ ಪ್ರಭುಶೇಖರ್ ರವರು ಉದ್ದನೆ ಕತ್ತಿಯಿಂದ ತನ್ನ ಕುತ್ತಿಗೆಯ ಭಾಗಕ್ಕೆ ಹಲ್ಲೆ ಮಾಡಲು ಪ್ರಯತ್ನಿಸಿದಾಗ ತಾನು ತನ್ನ ಎರಡು ಕೈಗಳಿಂದ ತಡೆದೆ. ಆ ಸಂದರ್ಭದಲ್ಲಿ ತನ್ನ ಎರಡು ಕೈಗಳಿಗೆ ಮತ್ತು ರಟ್ಟೆಗಳಿಗೆ ಗಾಯವಾಯಿತು. 1ನೇ ಆರೋಪಿ ತನಗೆ ಏಳೆಂಟು ಬಾರಿ ಕೈಗೆ ಕಡಿದಿರುತ್ತಾನೆ. ಹೋಟೆಲಿನ ಹಿಂಭಾಗದಲ್ಲಿ ತಾನು ಓಡಲು ಪ್ರಯತ್ನಿಸಿದಾಗ ಹಿಂದಿನ ಬಾಗಿಲಲ್ಲಿ 2ನೇ ಹಾಗೂ 3ನೇ ಆರೋಪಿಗಳು ಕತ್ತಿ ಹಿಡಿದುಕೊಂಡು ನಿಂತಿದ್ದರು. ಅಲ್ಲಿ ತಾನು ಬಿದ್ದಾಗ 2ನೇ ಆರೋಪಿ ತನ್ನ ಬಲಗಾಲಿಗೆ ಕತ್ತಿಯಿಂದ ಕಡಿದರು. 3ನೇ ಆರೋಪಿ ನನ್ನ ಬಲಕೈ ಹಿಂಭಾಗಕ್ಕೆ ಹಾಗೂ ಸೊಂಟಕ್ಕೆ ಕತ್ತಿಯಿಂದ ಕಡಿದು ನನ್ನ ಹೆಂಡತಿ, ಮಕ್ಕಳು, ತಂದೆ–ತಾಯಿ ಹಾಗೂ ತಂಗಿ ಯಾರನ್ನು ಬಿಡುವುದಿಲ್ಲ ಎಂದು ಹೇಳಿದರು ಮತ್ತು ತಾನು ಅಲ್ಲೇ ಬಿದ್ದು ಹೋದೆ. ಅಲ್ಲಿ ತನಗೆ ಗ್ಲಾಸ್ ಹೊಡೆದು ಹಾಕಿದ ಶಬ್ದ ಕೇಳಿಸಿತು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 4** –ಫ್ರಾಸಾ–1 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಮಾರನೇ ದಿನ ಅದು ತನ್ನ ಜೇಪಿನದ್ದು ಎಂದು ತನಗೆ ಗೊತ್ತಾಯಿತು. ಆರೋಪಿಗಳು ತನ್ನ ಜೇಪಿನ ಗ್ಲಾಸ್ ಅನ್ನು ಹೊಡೆದು ಹಾಕಿದ್ದರು. ಚಾಸಾ–3 ತನ್ನನ್ನು ಪಿಕ್‌ಅಪ್ ವಾಹನದಲ್ಲಿ ಸಿದ್ದಾಪುರ ಸರ್ಕಾರಿ ಆಸ್ಪತ್ರೆಗೆ ಕರೆತಂದು ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಸರ್ಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆಗೆ ದಾಖಲಾಗಿರುತ್ತೇನೆ. ತಾನು ಆಸ್ಪತ್ರೆಯಲ್ಲಿ ದಾಖಲಾಗಿದ್ದಾಗ ಮಧ್ಯಾಹ್ನ 12.15 ಗಂಟೆಗೆ ಪೊಲೀಸರು ಆಸ್ಪತ್ರೆಗೆ ಬಂದು ತನ್ನ ನಿಪಿ–1 ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ನಿಪಿ–1(ಎ) ತನ್ನ ಸಹಿ ಆಗಿರುತ್ತದೆ. ಮಡಿಕೇರಿ ಸರ್ಕಾರಿ ಆಸ್ಪತ್ರೆಯಲ್ಲಿ ತನಗೆ ಹೊಲಿಗೆ ಹಾಕಿದ್ದು, ಹೆಚ್ಚಿನ ಚಿಕಿತ್ಸೆಯನ್ನು ಮಂಗಳೂರಿನ ಕೆ.ಎಂ. ಆಸ್ಪತ್ರೆಯಲ್ಲಿ ಪಡೆದುಕೊಂಡೆ. ಆರೋಪಿಗಳು ರಾಜಕೀಯ ವೈಶಮ್ಯದಿಂದ ತನ್ನ ಮೇಲೆ ಹಲ್ಲೆ ಮಾಡಿರುವುದಾಗಿದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು .

**ಪ್ರಃ 5** –ಫ್ರಾಸಾ–1 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಮು.ಮಾ–1 ಮತ್ತು ಮು.ಮಾ–2 ಕಪ್ಪು ಬಣ್ಣದ ಜೀನ್ಸ್ ಪ್ಯಾಂಟು ಹಾಗೂ ಟಿ–ಶರ್ಟು ತಾನು ಆ ದಿನ ಧರಿಸಿದ್ದ ಬಟ್ಟೆಗಳು ಆಗಿರುತ್ತದೆ. ಸದರಿ ಎರಡು ಬಟ್ಟೆಗಳಿಗೆ ರಕ್ತ ಆಗಿತ್ತು ಎಂದು ನುಡಿದಿರುತ್ತಾರೆ. ಮು.ಮಾ–3 ರಿಂದ 5 ತನ್ನ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ್ದ ಕತ್ತಿಗಳು ಎಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ. ಫ್ರಾಸಾ–1 ಮುಂದುವರೆದು 1 ಹಾಗೂ 2ನೇ ಆರೋಪಿಗಳನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ. 3ನೇ ಆರೋಪಿ ಫ್ರಾಸಾ–1 ರವರ ಸಾಕ್ಷ್ಯ ಸಮಯ ನ್ಯಾಯಾಲಯದಲ್ಲಿ ಗೈರುಹಾಜರಿದ್ದು ಅವರನ್ನು ಗುರುತಿಸಲು 3ನೇ ಆರೋಪಿರ ಪರ ವಕೀಲರು ತಕರಾರು ಇಲ್ಲ ಎಂದು ಹೇಳಿದ ಕಾರಣ ಗುರುತಿಸಲಾಗಿದೆ ಎಂದು ಪರಿಗಣಿಸಲಾಗಿತ್ತು. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು .

**ಪ್ರಃ 6** –ಪ್ರಾಸಾ–2 ಅಪ್ಪಯ್ಯ ಬಿ.ಎನ್. ಅಲಿಯಾಸ್ ಚಂದನ್ ತನ್ನ ಸಾಕ್ಷ್ಯದಲ್ಲಿ ಪ್ರಾಸಾ–1 ತನ್ನ ಸ್ನೇಹಿತ. ಚಾಸಾ–3 ರಿಂದ ಚಾಸಾ–8 ರವರು ತಮ್ಮ ಊರಿನವರು. ಆರೋಪಿಗಳು ಸಹ ತಮ್ಮ ಊರಿನವರು. ಪ್ರಾಸಾ–1 ಕಾಂಗ್ರೇಸ್ ಪಕ್ಷದ ಪ್ರಧಾನ ಕಾರ್ಯದರ್ಶಿ. ಆರೋಪಿಗಳು ಬಿಜೆಪಿ ಪಕ್ಷಕ್ಕೆ ಸೇರಿದರು. ಆರೋಪಿಗಳಿಗು ಹಾಗೂ ಪ್ರಾಸಾ–1 ರವರಿಗೆ ಸಂಬಂಧ ಚೆನ್ನಾಗಿರಲಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 7** –ಪ್ರಾಸಾ–2 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 28–09–2022 ರಂದು ತಮ್ಮ ಊರಿನಲ್ಲಿ ಇರುವ ಜಯಣ್ಣ ರವರ ಅಕ್ಕ ತೀರಿಹೋಗಿದ್ದಾರೆ ಎಂದು ತಿಳಿದು ತಾನು ಹಾಗೂ ಪ್ರಾಸಾ–1 ಅವರ ಬಾಬ್ತು ಜೀಪಿನಲ್ಲಿ ಪ್ರಾಸಾ–1 ರವರ ಮನೆಯಿಂದ ಹೊರಟೆವು ದಾರಿ ಮಧ್ಯದಲ್ಲಿ ಚಾಸಾ–5 ರವರ ಹೋಟೆಲ್ ನಲ್ಲಿ ಚಹ ಕುಡಿಯಲು ತಾವು ಇಳಿದೆವು. ಆಗ ಸಮಯ ಬೆಳಿಗ್ಗೆ 9.00 ಗಂಟೆ ಆಗಿತ್ತು. ತಾವು ಹೋಟೆಲ್ ನ ಒಳಗಡೆ ಇದ್ದ ಬೆಂಚಿನಲ್ಲಿ ಟೀ ಕುಡಿಯುತ್ತಿರುವಾಗ ಆರೋಪಿಗಳು ಕೈಯಲ್ಲಿ ಕತ್ತಿ ಹಿಡಿದುಕೊಂಡು ಬಂದು 1ನೇ ಆರೋಪಿ ಪ್ರಭುಶೇಖರ ಕತ್ತಿಯಿಂದ ಪ್ರಾಸಾ–1 ರವರಿಗೆ ಹಲ್ಲೆ ಮಾಡಲು ಪ್ರಾರಂಭಿಸಿದರು ಆ ಸಂದರ್ಭದಲ್ಲಿ ಪ್ರಾಸಾ1 ತನ್ನ ಎರಡು ಕೈಗಳನ್ನು ಅಡ್ಡ ಹಿಡಿದ ಕಾರಣ ಅವರ ಎರಡು ಕೈಗಳಿಗೆ 4 ರಿಂದ 5 ಗಾಯಗಳು ಆಗಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 8** –ಪ್ರಾಸಾ–2 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ತಾನು ಆರೋಪಿಗಳನ್ನು ತಡೆಯಲು ಹೋದಾಗ 2ನೇ ಆರೋಪಿ ಅಪ್ಪು ರವೀಂದ್ರ ತನ್ನ ಬಲಗಾಲಿಗೆ ಕತ್ತಿಯಿಂದ ಹಲ್ಲೆ ಮಾಡಿದರು. ತನ್ನ ಕಾಲಿಗೆ ಗಾಯವಾಗಿತ್ತು. ಪ್ರಾಸಾ–1 ಹೋಟೆಲ್ ನ ಹಿಂಭಾಗದಿಂದ ಓಡಲು ಪ್ರಯತ್ನಿಸಿದರು. ಆಗ ಮೂರು ಜನ ಆರೋಪಿಗಳು ಅವರನ್ನು ಹಿಂಬಾಲಿಸಿಕೊಂಡು ಅಟ್ಟಿಸಿಕೊಂಡು ಹೋದರು. ಹೋಟೆಲಿನ ಹಿಂಭಾಗದಲ್ಲಿ ಪ್ರಾಸಾ–1

ರವರ ಬಿದ್ದುಹೋಗಿದ್ದರು. ಅಲ್ಲಿ ಸಹ 3 ಜನ ಆರೋಪಿಗಳು ಪ್ರಾಸಾ–1 ರವರ ಮೇಲೆ ಕತ್ತಿಯಿಂದ ಹಲ್ಲೆ ಮಾಡಿದರು. ತಾನು ಹೋಟೆಲ್ ನ ಮುಂಭಾಗಕ್ಕೆ ಬಂದು ನಿಂತುಕೊಂಡೆ 1ನೇ ಆರೋಪಿ ಪ್ರಭು ಶೇಖರ್ ತನ್ನ ಕೈಯಲ್ಲಿ ಇದ್ದ ಕತ್ತಿಯಿಂದ ತಾವು ಬಂದ ಜೇಪಿನ ಗ್ಲಾಸಿಗೆ ಹೊಡೆದರು. ಆ ಸಂದರ್ಧದಲ್ಲಿ ಜೇಪಿನ ಗ್ಲಾಸ್ ಪುಡಿಯಾಗಿತ್ತು. ಅಲ್ಲಿಂದ ಆರೋಪಿಗಳು ಪಲಾಯನ ಮಾಡಿದ್ದರು. ಆ ಸಂದರ್ಭದಲ್ಲಿ ಚಾಸಾ–3 ತನ್ನ ಪಿಕ್ ಅಪ್ ವಾಹನದಲ್ಲಿ ಅಲ್ಲಿಗೆ ಬಂದಿದ್ದರು. ಅವರು ತನ್ನ ಬಳಿ ಕಾಲಿಗೆ ರಕ್ತವಾಗಿದ್ದನ್ನು ನೋಡಿ ಏನಾಯಿತು ಎಂದು ವಿಚಾರಿಸಿದ್ದು, ಆಗ ತಾನು ವಿಚಾರವನ್ನು ಹೇಳಿದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 9** –ಪ್ರಾಸಾ–2 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಆ ಬಳಿಕ ಚಾಸಾ–3, ಪ್ರಾಸಾ–1 ರವರನ್ನು ಹಾಗೂ ತನ್ನನ್ನು ಅವರ ಪಿಕ್ ಅಪ್ ವಾಹನದಲ್ಲಿ ಹಾಕಿಕೊಂಡು ಸಿದ್ಧಾಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲು ಮಾಡಿದರು. ಸಿದ್ಧಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ತನ್ನ ಕಾಲಿಗೆ ಹೊಲಿಗೆ ಹಾಕಲಾಯಿತು. ಆ ಬಳಿಕ ಪ್ರಾಸಾ–1 ರವರನ್ನು ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಲಾಯಿತು. ತಾನು ಸಹ ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ಬಂದೆ. ತನ್ನ ಕಾಲಿನ X–ray ಮಾಡಿ ತನಗೆ ಮೂಳೆ ಮುರಿತ ಆಗದ ಕಾರಣ ತನನ್ನು discharge ಮಾಡಿದರು. ಘಟನೆಯ ಬಗ್ಗೆ ಸಿದ್ಧಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನ್ನನ್ನು ವಿಚಾರಣೆ ಮಾಡಿದ್ದಾರೆ ಆ ಬಳಿಕ ತಾನು ಹಾಗೂ ಚಾಸಾ3 ಮನೆಗೆ ಬಂದೆವು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 10** –ಪ್ರಾಸಾ–2 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಅದೇ ದಿನ 4.00 ಗಂಟೆಗೆ ಪೊಲೀಸರು ತಮ್ಮನ್ನು ಕೃತ್ಯ ನಡೆದ ಸ್ಥಳಕ್ಕೆ ಬರಲು ಹೇಳಿದ್ದರು. ತಾನು ಸ್ಥಳವನ್ನು ತೋರಿಸಿದ ಮೇರೆಗೆ ಪೋಲಿಸರು ಸದರಿ ಸ್ಥಳವನ್ನು ಪರಿಶೀಲನೆ ಮಾಡಿ ಹೋಟೆಲ್ ನ ಹಿಂಭಾಗದಲ್ಲಿ

ಬಿದ್ದಿದ್ದ ಸ್ಥಳದಿಂದ ರಕ್ತ ಮಿಶ್ರಿತ ಮಣ್ಣು, ಸಾದಾಮಣ್ಣು ಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ತೆಗೆದು ಅಮಾನತ್ತುಪಡಿಸಿಕೊಂಡರು. ಅದೇ ರೀತಿ ಹೋಟೆಲ್‌ನ ಮುಂಭಾಗದಲ್ಲಿ ನಿಲ್ಲಿಸಿದ್ದ ಜೀಪಿನ ಗ್ಲಾಸುಗಳು ಪುಡಿಯಾಗಿದ್ದನ್ನು ಗಮನಿಸಿ ಸದರಿ ಪುಡಿಗಳನ್ನು ಹಾಗೂ ಜೀಪಿನ್ನು ಸಹ ತನ್ನ ಸಮಕ್ಷಮದಲ್ಲಿ ಅಮಾನತ್ತುಪಡಿಸಿಕೊಂಡರು. ಸದರಿ ಗ್ಲಾಸಿನ ಪುಡಿಗಳನ್ನು ಸಣ್ಣ ಬಾಟಲಿನಲ್ಲಿ ಸಂಗ್ರಹಿಸಿದ್ದು, ಅದನ್ನು ಪ್ಯಾಕ್ ಮಾಡಿ ಸೀಲು ಮಾಡಿದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು .

**ಪ್ರಃ 11** -ಫ್ರಾಸಾ-2 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಪೊಲೀಸರು ಸದರಿ ಸಂದರ್ಭದಲ್ಲಿ ನಿಪಿ-2 ರಂತೆ ಮಹಜರ್ ಬರೆದಿದ್ದು, ತಾನು ಸಹಿ ಹಾಕಿದ್ದೇನೆ. ನಿಪಿ-2(ಎ) ತನ್ನ ಸಹಿ ಆಗಿರುತ್ತದೆ. ನಿಪಿ-2 ರ ಸಂದರ್ಭದಲ್ಲಿ ನಿಪಿ-3 ರಂತೆ 3 ಫೋಟೊಗಳನ್ನು ಹಾಗೂ ನಿಪಿ-4 ರಂತೆ ವಿಡಿಯೋಗಳನ್ನು ತೆಗೆದಿರುತ್ತಾರೆ. ಪೊಲೀಸರು ಆ ಸಂದರ್ಭದಲ್ಲಿ ಮಾಡಿದ ವಿಡಿಯೋಗಳನ್ನು ನ್ಯಾಯಾಲಯದಲ್ಲಿ ಪ್ರದರ್ಶಿಸಿದಾಗ, ಅದರಲ್ಲಿ ಕಂಡ ಮಹಜರ್ ಸ್ಥಳವನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು .

**ಪ್ರಃ 12** -ಫ್ರಾಸಾ-2 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಮಾರನೇ ದಿನ ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಪೊಲೀಸರಿಗೆ ಕೃತ್ಯ ಸಮಯದಲ್ಲಿ ಫ್ರಾಸಾ-1 ಹಾಗೂ ತಾನು ಧರಿಸಿದ್ದ ಬಟ್ಟೆಗಳನ್ನು ಹಾಜರುಪಡಿಸಲು ಹೇಳಿದ್ದು, ತಾನು ಧರಿಸಿದ್ದ ಮು.ಮಾ-6 ನೀಲಿ ಬಣ್ಣದ ಪ್ಯಾಂಟು ಹಾಗೂ ಫ್ರಾಸಾ-1 ಧರಿಸಿದ್ದ ಮು.ಮಾ-1 ಕಪ್ಪು ಬಣ್ಣದ ಜೀನ್ಸ್‌ಪ್ಯಾಂಟು ಹಾಗೂ ಮು.ಮಾ-2 ಟಿ-ಶರ್ಟುನ್ನು ಪೊಲೀಸರ ಎದುರು ಹಾಜರುಪಡಿಸಿರುತ್ತೇನೆ. ಪೊಲೀಸರು ಅವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲು ಮಾಡಿ ನಿಪಿ-5 ರಂತೆ ಮಹಜರ್ ತಯಾರಿಸಿದ್ದರು. ನಿಪಿ-5(ಎ) ತನ್ನ ಸಹಿ ಆಗಿರುತ್ತದೆ. ಫ್ರಾಸಾ-1 ರವರ ಬಟ್ಟೆಗಳಿಗೆ ಹಾಗೂ ತನ್ನ ಪ್ಯಾಂಟಿಗೆ ಸಂಪೂರ್ಣವಾಗಿ ರಕ್ತ ಆಗಿತ್ತು. ಫ್ರಾಸಾ-1 ರವರ ಬಟ್ಟೆಗಳನ್ನು

ಆಸ್ಪತ್ರೆಯಿಂದ ತಾನೆ ತಂದಿದ್ದೆ ಎಂದು ನುಡಿದಿರುತ್ತಾರೆ ಮತ್ತು ಮು.ಮಾ–1, 2 ಮತ್ತು 6 ನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ 13** –ಫ್ರಾಸಾ–2 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಮು.ಮಾ–6 ಪ್ಯಾಂಟಿನಲ್ಲಿ ಒಂದು ಬಲಗಾಲಿನ ಮೊಣಗಂಟಿನ ಕೆಳಗಿನ ಭಾಗವನ್ನು ಕತ್ತರಿಸಲಾಗಿದೆ. ತನ್ನ ಸಮಕ್ಷಮದಲ್ಲಿ ಪೊಲೀಸರು ಮು.ಮಾ–7 ಹಾಗೂ 8 ರಕ್ತ ಮಿಶ್ರಿತ ಮಣ್ಣು ಹಾಗೂ ಸಾದಾ ಮಣ್ಣು ಹಾಗೂ ಮು.ಮಾ–9 ಜೀಪಿನ ಗ್ಲಾಸಿನ ಚೂರುಗಳನ್ನು ವಶಪಡಿಸಿರುತ್ತಾರೆ. ನಿಪಿ–5 ರ ಸಂದರ್ಭದಲ್ಲಿ ಪೊಲೀಸರು ನಿಪಿ–6 ರಂತೆ 3 ಫೋಟೊಗಳನ್ನು ತೆಗೆದಿರುತ್ತಾರೆ. ಮು.ಮಾ–3 ರಿಂದ 5 ರ ಕತ್ತಿಗಳಿಂದಲೇ ಆರೋಪಿಗಳು ತನ್ನ ಹಾಗೂ ಫ್ರಾಸಾ–1 ರ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು .

**ಪ್ರಃ 14** –ಫ್ರಾಸಾ–2 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ನ್ಯಾಯಾಲಯದಲ್ಲಿ ಸಾಕ್ಷ್ಯ ಸಮಯ ಹಾಜರಿದ್ದ 1 ಮತ್ತು 2 ನೇ ಆರೋಪಿತರನ್ನು ಗುರುತಿಸಿರುತ್ತಾರೆ. ಸದರಿ ಸಾಕ್ಷ್ಯ ಸಮಯ 3ನೇ ಆರೋಪಿ ಗೈರು ಹಾಜರಿದ್ದು, ಅವರನ್ನು ಗುರುತಿಸಲು 3ನೇ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ಹೇಳಿದ ಕಾರಣ ಗುರುತಿಸಲಾಗಿದೆ ಎಂದು ಪರಿಗಣಿಸಲಾಗಿದೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ 15** –ಫ್ರಾಸಾ–3 ಸೋಮಣ್ಣ ಸಿ.ಕೆ. ತನ್ನ ಸಾಕ್ಷ್ಯದಲ್ಲಿ ಫ್ರಾಸಾ–1 ಹಾಗೂ 2 ರವರ ಪರಿಚಯ ಇದೆ. ಚಾಸಾ–4 ರಿಂದ 8 ರವರ ಪರಿಚಯ ಇದೆ. ಆರೋಪಿಗಳ ಪರಿಚಯ ಇದೆ ಅವರು ತಮ್ಮ ಊರಿನವರು. ದಿನಾಂಕ 28–09–2022 ರಂದು ತಾನು ತನ್ನ ತಂದೆಯ ಪಿಕ್ ಅಪ್ ವಾಹನ KA–12–B–4813 ರಲ್ಲಿ ಮನೆಗೆ ಸಾಮಾನು ತರಲು ತಮ್ಮ ಗ್ರಾಮದ

ಚಾಸಾ–5 ರವರ ಹೋಟೆಲ್ ಬಂದಾಗ ಫ್ರಾಸಾ–2 ಹೋಟೆಲ್ ಹತ್ತಿರ ನಿಂತಿದ್ದು, ಅವರ ಬಲ ಮಂಡಿಯ ಬಳಿ ಗಾಯವಾಗಿ ರಕ್ತ ಬರುತಿತ್ತು, ತಾನು ಅವರನ್ನು ವಿಚಾರಿಸಿದಾಗ ಆರೋಪಿಗಳು ಹಳೆಯ ರಾಜಕೀಯ ವೈಶಮ್ಯದಿಂದ ಫ್ರಾಸಾ–1 ರವರ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಮತ್ತು ಫ್ರಾಸಾ–1 ಹೋಟೆಲ್‌ನ ಹಿಂಭಾಗದಲ್ಲಿ ಕುಸಿದು ಬಿದಿದ್ದಾರೆ ಎಂದು ಹೇಳಿದ್ದು, ತಾನು ಹೋಗಿ ನೋಡಿದಾಗ ಫ್ರಾಸಾ–1 ರವರು ತೀವ್ರವಾದ ರಕ್ತಸ್ರಾವದಿಂದ ಅಲ್ಲೆ ಬಿದಿದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 16** –ಫ್ರಾಸಾ–3 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ತಾನು ಫ್ರಾಸಾ–1 ರವರನ್ನು ಎತ್ತಿ ತನ್ನ ಪಿಕ್ ಅಪ್ ಜೀಪಿಗೆ ಹಾಕಿ ಫ್ರಾಸಾ–2 ರವನ್ನು ಕರೆದುಕೊಂಡು ಸಿದ್ದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬಂದೆ ಅಲ್ಲಿ ಪ್ರಥಮ ಚಿಕಿತ್ಸೆ ಆದ ಬಳಿಕ ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದೆವು. ಪೊಲೀಸರು ತನ್ನನ್ನು ವಿಚಾರಣೆ ಮಾಡಿದಾಗ ತಾನು ಅವರಿಗೆ ಈ ವಿಚಾರಗಳನ್ನು ಹೇಳಿದ್ದೆ. ತಾನು ಫ್ರಾಸಾ–2 ರವನ್ನು ನೋಡುವ ಸಂದರ್ಭ ಸಮಯ ಸುಮಾರು ಬೆಳಿಗ್ಗೆ 9.15 ರಿಂದ 9.20 ಗಂಟೆ ಆಗಿರಬಹುದು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 17** –ಫ್ರಾಸಾ–4 ಆಶ್ರಫ್ ಟಿ. ಎಂ. ತನ್ನ ಸಾಕ್ಷ್ಯದಲ್ಲಿ ತಾನು ಚಾಸಾ–5 ರವರ ಜೊತೆ ಕೆಲಸ ಮಾಡುತ್ತೇನೆ. ತಾನು 1ನೇ ಆರೋಪಿಗೆ ಸೇರಿದ ಅರೆಕಾಡಿನಲ್ಲಿ ಇರುವ ಕಟ್ಟದಲ್ಲಿ ಹೋಟೆಲ್ ಕೆಲಸ ಮಾಡುತ್ತೇನೆ. ಸದರಿ ಹೋಟೆಲ್ ನ ಹೆಸರು ಎಂ.ಎಸ್.ಡಿ. ತನಗೆ ಫ್ರಾಸಾ–1 ರಿಂದ ಫ್ರಾಸಾ–3 ರವರ ಪರಿಚಯ ಇದೆ. ಅದೇ ರೀತಿ ಆರೋಪಿಗಳ ಪರಿಚಯ ಸಹ ಇದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 18** –ಫ್ರಾಸಾ–4 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ವಿಚಾರಣೆ ಮಾಡಿದ್ದಾರೆ. ಎರಡು ವರ್ಷದ ಹಿಂದೆ ಒಂದು ದಿನ ಬೆಳಿಗ್ಗೆ 9.00 ಗಂಟೆಗೆ ತಾನು ಹೋಟೆಲ್ ನಲ್ಲಿ ಕೆಲಸ ಮಾಡುತಿದ್ದೆ. ಫ್ರಾಸಾ–1 ಹಾಗೂ 2 ನಮ್ಮ ಹೋಟೆಲ್ ಗೆ ಜೀಪಿನಲ್ಲಿ ಬಂದಿದ್ದು, ತಮ್ಮ ಹೋಟೆಲ್ ನಲ್ಲಿ ಸ್ವಲ್ಪ ನೀರು ಕುಡಿದು, ಟೀ ಕೇಳಿದ್ದರು ಅವರ ಮೈಮೇಲೆ ರಕ್ತ ಇತ್ತು. ಅವರು ಬಂದಿದ್ದ ಜೀಪಿನ ಗ್ಲಾಸ್ ಒಡೆದು ಹೋಗಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 19** –ಫ್ರಾಸಾ–4 ಅಭಿಯೋಜಕರು ಮಾಡಿದ ಪಾಟೀಸವಾಲಿನ ತನ್ನ ಸಾಕ್ಷ್ಯದಲ್ಲಿ ಫ್ರಾಸಾ–1 ಮತ್ತು ಫ್ರಾಸಾ–2 ತಮ್ಮ ಹೋಟೆಲ್ ಗೆ ಜೀಪಿನಲ್ಲಿ ಬಂದಿದ್ದ ದಿನಾಂಕ 28–09–2022 ಆಗಿತ್ತು ಎಂದರೆ ಸರಿ ಎಂದು ಒಪ್ಪಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 20** –ಫ್ರಾಸಾ–5 ಹರ್ಷದ್ ತನ್ನ ಸಾಕ್ಷ್ಯದಲ್ಲಿ ತನಗೆ ಚಾಸಾ–5 ರವರ ಪರಿಚಯ ಇದೆ. ಅವರಿಗೆ ಅರೆಕಾಡಿನಲ್ಲಿ M.S.D ಹೆಸರಿನ ಹೋಟೆಲ್ ಇದೆ. ಚಾಸಾ–7 ತಮ್ಮ ಊರಿನವರು. ತನಗೆ ಫ್ರಾಸಾ–1 ರಿಂದ 3 ರವರ ಪರಿಚಯ ಇದೆ. ನಿಪಿ–2 ರ ಕೃತ್ಯ ಸ್ಥಳದ ಮಹಜರ್ ನಲ್ಲಿ ಇರುವ ನಿಪಿ–2(ಬಿ) ತನ್ನ ಸಹಿ ಆಗಿರುತ್ತದೆ. ನಿಪಿ–3 ರ ಫೋಟೊಗಳಲ್ಲಿ ತಾನು ಕಾಣುತಿದ್ದೇನೆ. ನಿಪಿ–3 ರ 1, 2 ಹಾಗೂ 3ನೇ ಫೋಟೋ ಚಾಸಾ–5 ರವರ ಹೋಟೆಲ್ ಕಟ್ಟಡದ ಮುಂಭಾಗವಾಗಿರುತ್ತದೆ. ಸದರಿ ಕಟ್ಟಡದಲ್ಲಿ ಹಿಂದಿನ ದಿನ ಯಾವುದೋ ಘಟನೆ ಆಗಿದೆ ಎಂದು ಪೊಲೀಸರು ಅಲ್ಲಿಗೆ ಬಂದಿದ್ದು, ನಿಪಿ–2 ರ ಮಹಜರ್ ಗೆ ಸಹಿ ಹಾಕಬೇಕು ಎಂದು ಪೊಲೀಸರು ಹೇಳಿದ ಕಾರಣ ತಾನು ಸದರಿ ಮಹಜರ್ ಗೆ ಸಹಿ ಹಾಕಿದ್ದೇನೆ. ನಿಪಿ–3 ರ ಫೋಟೊದಲ್ಲಿ ಫ್ರಾಸಾ–2 ಕಾಣುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 21** –ಫ್ರಾಸಾ–5 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ನಿಪಿ–5 ಇರುವ ನಿಪಿ–5(ಬಿ) ತನ್ನ ಸಹಿ ಆಗಿರುತ್ತದೆ. ನಿಪಿ–6 ರ ಫೋಟೊಗಳಲ್ಲಿ ತಾನು ಕಾಣುತಿದ್ದೇನೆ. ಸದರಿ ಫೋಟೊಗಳಲ್ಲಿ ಫ್ರಾಸಾ–2 ಬಟ್ಟೆಗಳನ್ನು ಹಾಜರುಪಡಿಸುತ್ತಿರುವುದು ಕಾಣುತ್ತದೆ ಎಂದು ನುಡಿದಿರುತ್ತಾರೆ. ನಿಪಿ–4 ಸಿಡಿಯನ್ನು ನ್ಯಾಯಾಲಯದಲ್ಲಿ ಪ್ರದರ್ಶಿಸಲಾಗಿ ಸದರಿ ಸಿಡಿಯಲ್ಲಿ ಇದ್ದ ಫೋಟೊಗಳನ್ನು ನೋಡಿ ಗುರುತಿಸಿರುತ್ತಾರೆ. ಮು.ಮಾ–1, 2 ಹಾಗೂ 6 ರ ಬಟ್ಟೆಗಳನ್ನು ಫ್ರಾಸಾ–2 ಠಾಣೆಯಲ್ಲಿ ತನ್ನ ಸಮಕ್ಷಮ ಹಾಜರುಪಡಿಸಿದ್ದರು. ಮು.ಮಾ–7, 8 ಹಾಗೂ 9 ರ ಮೇಲೆ ಅಂಟಿಸಿದ ಚೀಟಿಯಲ್ಲಿ ತನ್ನ ಸಹಿ ಇರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 22** –ಫ್ರಾಸಾ–6 ಸಿದ್ದಿಕ್ ಸಾಕ್ಷ್ಯದಲ್ಲಿ ತನಗೆ ಫ್ರಾಸಾ–5, ಫ್ರಾಸಾ–1, ಫ್ರಾಸಾ–2 ಹಾಗೂ ಆರೋಪಿತರ ರವರ ಪರಿಚಯ ಇದೆ. ಚಾಸಾ–5 ರವರಿಗೆ ಅರೆಕಾಡಿನಲ್ಲಿ M.S.D ಹೆಸರಿನ ಹೋಟೆಲ್ ಇದೆ. ನಿಪಿ–3 ರ ಫೋಟೊಗಳಲ್ಲಿ ತಾನು ಕಾಣುತಿದ್ದೇನೆ. ನಿಪಿ–3 ರ 1, 2 ಹಾಗೂ 3ನೇ ಫೋಟೋ ಚಾಸಾ–5 ರವರ ಹೋಟೆಲ್ ಕಟ್ಟಡದ ಮುಂಭಾಗವಾಗಿರುತ್ತದೆ. ನಿಪಿ–3 ರ ಫೋಟೊದಲ್ಲಿ ಫ್ರಾಸಾ–2 ಕಾಣುತ್ತಾರೆ. ಪೊಲೀಸರು ಸದರಿ ಸ್ಥಳದಲ್ಲಿ ಏನೋ ಗಲಾಟೆ ಆಗಿದೆ ಎಂದು ಅಲ್ಲಿಗೆ ಬಂದಿದ್ದರು. ನಿಪಿ–2 ಕೃತ್ಯ ಸ್ಥಳದ ಮಹಜರ್ ಆಗಿದ್ದು, ಅದರಲ್ಲಿ ಇರುವ ನಿಪಿ–2(ಸಿ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 23** –ಫ್ರಾಸಾ–6 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ನಿಪಿ–6 ರ ಫೋಟೊಗಳಲ್ಲಿ ಫ್ರಾಸಾ–2 ಪೊಲೀಸರಿಗೆ ಬಟ್ಟೆಗಳನ್ನು ನೀಡುತ್ತಿರುವುದು ಕಾಣುತ್ತದೆ. ನಿಪಿ–5 ರ ದಾಖಲೆ ಇರುವ ನಿಪಿ–5(ಸಿ) ತನ್ನ ಸಹಿ ಆಗಿರುತ್ತದೆ. ಮು.ಮಾ–6 ರ ಪ್ಯಾಂಟನ್ನು ಫ್ರಾಸಾ–2 ಹಾಜರುಪಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 24** –ಫ್ರಾಸಾ–7 ಮುಸ್ತಾಫ ತನ್ನ ಸಾಕ್ಷ್ಯದಲ್ಲಿ ತನಗೆ ಚಾಸಾ–9 ರವರ ಪರಿಚಯ ಇದೆ. ಅದೇ ರೀತಿ ಆರೋಪಿಗಳ ಪರಿಚಯ ಇದೆ. ಕಳೆದ ಎರಡು ವರ್ಷದ ಹಿಂದೆ ಅರೆಕಾಡಿನಲ್ಲಿ ಕ್ರಿಕೇಟ್ ಟೂರ್ನಮೆಂಟ್ ಗಾಗಿ ತಾವು ಸ್ಕೂಲ್ ಮೈದಾನವನ್ನು ಸ್ವಚ್ಛ ಮಾಡುತ್ತಿದ್ದೆವು. ಸಿದ್ದಾಪುರ ಪೊಲೀಸ್ ಠಾಣೆಯ ಪೊಲೀಸರು ಜೀಪಿನಲ್ಲಿ ಬಂದು 1ನೇ ಆರೋಪಿ ಪ್ರಭುಶೇಖರ ಅವರ ಮನೆಗೆ ಕರೆದುಕೊಂಡು ಹೋದರು. ನಿಪಿ–8 ದಾಖಲೆಯಲ್ಲಿ ಇರುವ ನಿಪಿ–8(ಎ) ತನ್ನ ಸಹಿ ಆಗಿರುತ್ತದೆ. ಆ ಸಂದರ್ಭ ನಿಪಿ–9 ರಂತೆ ಫೋಟೋ ತೆಗೆದರು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 25** –ಫ್ರಾಸಾ–7 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ನಿಪಿ–10 ನ್ನು ನ್ಯಾಯಾಲಯದಲ್ಲಿ ಪ್ರದರ್ಶಿಸಿದಾಗ ಅದರಲ್ಲಿ ಇದ್ದ ಫೋಟೋ ಹಾಗೂ ವಿಡಿಯೋಗಳನ್ನು ನೋಡಿ ಗುರುತಿಸಿರುತ್ತಾರೆ. ಮು.ಮಾ–3 ರಿಂದ 5, ಮು.ಮಾ–10 ರಿಂದ 13 ತನ್ನ ಮುಂದೆ ಹಾಜರುಪಡಿಸಿದ ಕತ್ತಿ ಹಾಗೂ ಬಟ್ಟೆಗಳು ಎಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ ಮತ್ತು 1 ಮತ್ತು 3 ನೇ ಆರೋಪಿಗಳನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ. ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 26** –ಫ್ರಾಸಾ–8 ರಮೇಶ್ ತನ್ನ ಸಾಕ್ಷ್ಯದಲ್ಲಿ ಆರೋಪಿಗಳ ಪರಿಚಯ ಇದೆ. ಅವರು ತಮ್ಮ ಊರಿನವರು. ಅದೇ ರೀತಿ ಫ್ರಾಸಾ–1 ಹಾಗುಾ 2 ಹಾಗೂ 7 ರವರ ಪರಿಚಯ ಇದೆ. ನಿಪಿ–8 ಇರುವ ನಿಪಿ–8(ಬಿ) ತನ್ನ ಸಹಿ ಆಗಿರುತ್ತದೆ. ಸದರಿ ಸಹಿಯನ್ನು ಎರಡು ವರ್ಷಗಳ ಹಿಂದೆ 1 ನೇ ಆರೋಪಿಯ ಮನೆಯಲ್ಲಿ ಮಾಡಿದ್ದೇನೆ. ನಿಪಿ–9 ರ ಫೋಟೊಗಳು ಆ ಸಂದರ್ಭದಲ್ಲಿ ತೆಗೆದ ಫೋಟೊಗಳಾಗಿವೆ. ಅದೇ ರೀತಿ ನಿಪಿ–10 ವಿಡಿಯೋವನ್ನು ಸಹ ಆ ಸಂದರ್ಭದಲ್ಲಿ ಚಿತ್ರೀಕರಿಸಿದ್ದಾಗಿದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 27** –ಪ್ರಾಸಾ–9 ಪೂಣಚ್ಚಎನ್. ಎಮ್ ತನ್ನ ಸಾಕ್ಷ್ಯದಲ್ಲಿ ಆರೋಪಿಗಳ ಪರಿಚಯ ಇದೆ. ಅವರು ತಮ್ಮ ಊರಿನವರು. ಅದೇ ರೀತಿ ಪ್ರಾಸಾ–1 , 2 , 7 ,8 ಹಾಗೂ ಚಾಸಾ–10 ರವರ ಪರಿಚಯ ಇದೆ. ಕಳೆದ ಎರಡು ವರ್ಷದ ಹಿಂದೆ ಪೊಲೀಸರು ತಮ್ಮನ್ನು 2 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿ ತೋಟದಲ್ಲಿ ಒಂದು ವಿಡಿಯೋ ಮಾಡಿರುತ್ತಾರೆ. ನಿಪಿ–11 ದಾಖಲೆಯಲ್ಲಿ ಇರುವ ನಿಪಿ–11(ಎ) ತನ್ನ ಸಹಿ ಆಗಿರುತ್ತದೆ. ನಿಪಿ–11 ರ ಸಮಯದಲ್ಲಿ ನಿಪಿ–12 ರಂತೆ ಫೋಟೊಗಳನ್ನು ತೆಗೆಯಲಾಯಿತು. ನಿಪಿ–13 ಡಿವಿಡಿಯನ್ನು ನ್ಯಾಯಾಲಯದಲ್ಲಿ ಪ್ರದರ್ಶಿಸಲಾಗಿ ಅದರಲ್ಲಿ ಇದ್ದ ದೃಶ್ಯಾವಳಿಗಳನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 28** –ಪ್ರಾಸಾ–10 ಕುಶಾಲಪ್ಪ ತನ್ನ ಸಾಕ್ಷ್ಯದಲ್ಲಿ ಪ್ರಾಸಾ–9 ತನ್ನ ನೆರೆಕೆರೆಯವರು. ಆರೋಪಿಗಳ ಪರಿಚಯ ಇದೆ. ಪ್ರಾಸಾ–1 ರಿಂದ ಪ್ರಾಸಾ–3 ರವರು ಸಹ ತಮ್ಮ ನೆರೆಕೆರೆಯವರು. ನಿಪಿ–11 ದಾಖಲೆಯಲ್ಲಿ ಇರುವ ನಿಪಿ–11(ಬಿ) ತನ್ನ ಸಹಿ ಆಗಿರುತ್ತದೆ. ನಿಪಿ–12 ರ ಫೋಟೊದಲ್ಲಿ ತಾನು ಕಾಣುತ್ತಿದ್ದು, ಅದು ಆರೋಪಿಯ ಮನೆಯ ಹತ್ತಿರ ಇರುವ ತೋಟದಲ್ಲಿ ತೆಗೆದ ಫೋಟೊ ಆಗಿದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 29** –ಪ್ರಾಸಾ–11 ಕೃಷ್ಣಮೂರ್ತಿ ತನ್ನ ಸಾಕ್ಷ್ಯದಲ್ಲಿ ತಾನು 2022 ರಿಂದ 2024 ರವರೆಗೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕೆಲಸ ಮಾಡಿಕೊಂಡಿದ್ದೆ. ದಿನಾಂಕ 09–10–2022 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಮಾನತ್ತುಪಡಿಸಿಕೊಂಡ ಸ್ವತ್ತುಗಳನ್ನು ಮೈಸೂರಿನ RFSL ಗೆ ಸ್ವತ್ತುಗಳನ್ನು ತಲುಪಿಸುವಂತೆ ತನಿಖಾಧಿಕಾರಿಗಳು ಆದೇಶಿಸಿದ್ದು, ಆ ಪ್ರಕಾರ ದಿನಾಂಕ 09–10–2022 ರಂದು ಸೀಲಾದ 5 ಸ್ವತ್ತುಗಳನ್ನು ಚಾಸಾ–31 ರವರಿಂದ ಪಡೆದುಕೊಂಡು ಮೈಸೂರಿಗೆ ಹೋಗಿದ್ದೆ ಮತ್ತು

ಮಾರನೆ ದಿನ 10–10–2022 ರಂದು ಮಧ್ಯಾಹ್ನ 1.45 ಗಂಟೆಗೆ ಮೈಸೂರಿನ RFSL ಗೆ ಹೋಗಿ ಅಲ್ಲಿ ವಸ್ತುಗಳನ್ನು ನೀಡಿ, ದಿನಾಂಕ 11–10–2022 ರಂದು RFSL ನಿಂದ ಪಡೆದುಕೊಂಡಿದ್ದ ಸ್ವೀಕೃತಿಯನ್ನು ತನಿಖಾಧಿಕಾರಿಗಳ ಎದುರು ಹಾಜರುಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 30** –ಫ್ರಾಸಾ–12 ರಾಜೇಶ್ವರಿ ತನ್ನ ಸಾಕ್ಷ್ಯದಲ್ಲಿ ತಾನು 2016 ರಿಂದ 2024 ರ ವರೆಗೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಮಹಿಳಾ ಪೊಲೀಸ್ ಪೇದೆಯಾಗಿ ಕೆಲಸ ಮಾಡಿದ್ದೆ. ದಿನಾಂಕ 20–10–2022 ರಂದು ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಸ್ವತ್ತುಗಳನ್ನು ಮೈಸೂರಿನ ವಿಧಿವಿಜ್ಞಾನ ಪ್ರಯೋಗ ಶಾಲೆಗೆ ಕೊಟ್ಟು ಸ್ವೀಕೃತಿಯನ್ನು ಪಡೆದುಕೊಂಡು ಬರಲು ತನಿಖಾಧಿಕಾರಿಗಳು ಆದೇಶಿಸಿದ ಮೇರೆಗೆ ತಾನು ಮಡಿಕೇರಿ ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕರ ಕಛೇರಿಗೆ ತೆರಳಿ, ಅವರಿಂದ ಶಿಫಾರಸ್ಸು ಪತ್ರ ಪಡೆದುಕೊಂಡು ದಿನಾಂಕ 21–10–2022 ರಂದು ಸೀಲಾದ 7ವಸ್ತುಗಳನ್ನು ತೆಗೆದುಕೊಂಡು ಮೈಸೂರಿನ RFSL ಗೆ ಹೋಗಿ, ವಸ್ತುಗಳನ್ನು ಕೊಟ್ಟು, ಸ್ವೀಕೃತಿಯನ್ನು ಪಡೆದುಕೊಂಡು ಸಂಜೆ 5.00 ಗಂಟೆಗೆ ಠಾಣೆಗೆ ಹಾಜರಾಗಿ ತನಿಖಾಧಿಕಾರಿಗಳ ಎದುರು ಸ್ವೀಕೃತಿಯನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 31** –ಫ್ರಾಸಾ–13 ವಸಂತ ಕುಮಾರ್ ತನ್ನ ಸಾಕ್ಷ್ಯದಲ್ಲಿ ತಾನು 2016 ರಿಂದ 2023 ರವರೆಗೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕೆಲಸ ಮಾಡುತಿದ್ದೆ. ದಿನಾಂಕ 08–10–2022 ರಂದು ಈ ಪ್ರಕರಣದಲ್ಲಿ ಆರೋಪಿಗಳ ಪತ್ತಗಾಗಿ ತನ್ನನ್ನು ನೇಮಿಸಿದ್ದು, ಆ ಪ್ರಕಾರ ಚಾಸಾ–17 ಹಾಗೂ ಚಾಸಾ–21 ರವರ ಜೊತೆ ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲಕ್ಕೆ ದಿನಾಂಕ 09–10–2022 ರಂದು ಬೆಳಿಗ್ಗೆ 5.00 ಗಂಟೆಗೆ ತೆರಳಿದ್ದು, ಪೊಲೀಸ್ ಬಾತ್ಮೀದಾರರಿಂದ ಬಂದ ಖಚಿತ ಮಾಹಿತಿಯಂತೆ 1 ಹಾಗೂ 3ನೇ

ಆರೋಪಿಗಳು ವಿಟ್ಲ ಬಸ್ಸ್ ನಿಲ್ದಾಣದ ಕಡೆಗೆ ನಡೆದುಕೊಂಡು ಬರುತ್ತಿರುವಾಗ ಅವರನ್ನು ವಶಕ್ಕೆ ಪಡೆದುಕೊಂಡು 8.00ಗಂಟೆ ಸಮಯಕ್ಕೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಚಾಸಾ–31 ರವರ ಎದುರು ಹಾಜರುಪಡಿಸಿದ್ದು, ಚಾಸಾ–21 ಆ ಬಗ್ಗೆ ವರದಿ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 32** –ಫ್ರಾಸಾ–13 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಅದೇ ದಿನ ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಕತ್ತಿ ಹಾಗೂ ಧರಿಸಿದ್ದ ಬಟ್ಟೆಗಳನ್ನು ವಶಕ್ಕೆ ಪಡೆದುಕೊಳ್ಳುವ ಸಂದರ್ಭದಲ್ಲಿ ಫೋಟೊ ಹಾಗೂ ವಿಡಿಯೋಗಳನ್ನು ಮಾಡಿರುತ್ತೇನೆ, ನಂತರ ಅದನ್ನು ಠಾಣೆಗೆ ತಂದು ಕಂಪ್ಯೂಟರ್ ಗೆ ಹಾಕಿ, ಸಿಡಿ ಹಾಗೂ ಫೋಟೊಗಳ ಪ್ರಿಂಟ್ ತೆಗೆದಿರುತ್ತೇನೆ. ಈ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65(ಬಿ) ಅಡಿಯಲ್ಲಿ ನಿಪಿ–14 ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ನಿಪಿ–14(ಎ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 33** –ಫ್ರಾಸಾ–13 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 05–11–2022 ರಂದು 2ನೇ ಆರೋಪಿ ರವೀಂದ್ರ ರವರು ಕೃತ್ಯಕ್ಕೆ ಬಳಸಿದ್ದ ಕತ್ತಿ ಮತ್ತು ಬಟ್ಟೆಯನ್ನು ವಶಕ್ಕೆ ಪಡೆದುಕೊಳ್ಳುವ ಸಂದರ್ಭದಲ್ಲಿ ಎ.ಎಸ್.ಐ ತಮ್ಮಯ್ಯ ರವರು ಫೋಟೊ ಹಾಗೂ ವಿಡಿಯೋಗಳನ್ನು ಮಾಡಿ, ಅವುಗಳನ್ನು ತನಿಖಾಧಿಕಾರಿಗಳ ಎದುರು ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ತನಗೆ ಸದರಿ ಫೋಟೊ ಹಾಗೂ ವಿಡಿಯೋಗಳನ್ನು ಪ್ರಿಂಟ್ ಹಾಗೂ ಸಿಡಿಗೆ ಹಾಕುವಂತೆ ಹೇಳಿದ ಮೇರೆಗೆ ತಾನು ಫೋಟೊ ಹಾಗೂ ವಿಡಿಯೋಗಳನ್ನು ಪ್ರಿಂಟ್ ತೆಗೆದು, ಸಿಡಿಗೆ ಹಾಕಿ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 34** –ಪ್ರಾಸಾ–14 ಲಕ್ಷ್ಮೀಕಾಂತ ತನ್ನ ಸಾಕ್ಷ್ಯದಲ್ಲಿ ತಾನು 2020 ರಿಂದ ಆಗಸ್ಟ್ – 2023ರವರೆಗೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯಪೇದೆಯಾಗಿ ಕೆಲಸ ಮಾಡಿದ್ದೇನೆ. ದಿನಾಂಕ 28–09–2022 ರಂದು ತನಿಖಾಧಿಕಾರಿಗಳು ಕೃತ್ಯ ಸ್ಥಳದ ಮಹಜರ್ ಮಾಡುವ ಸಂದರ್ಭದಲ್ಲಿ ಚಾಸಾ–5 ರವರ ಹೋಟೆಲ್ ಗೆ ಹೋಗಿದ್ದು, ಆ ಸಂದರ್ಭದಲ್ಲಿ ಫೋಟೊಗಳನ್ನು ಹಾಗೂ ವಿಡಿಯೋಗಳನ್ನು ತೆಗೆದಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 35**–ಪ್ರಾಸಾ–14 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 29–09–2022 ರಂದು ಪ್ರಾಸಾ–2 ರವರು ಕೃತ್ಯ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ತನಿಖಾಧಿಕಾರಗಳ ಮುಂದೆ ಹಾಜರುಪಡಿಸಿದ್ದ ಸಂದರ್ಭದಲ್ಲಿ ಫೋಟೊಗಳನ್ನು ಹಾಗೂ ವಿಡಿಯೋಗಳನ್ನು ತೆಗೆದಿದ್ದೇನೆ. ಆ ಬಳಿಕ ಸದರಿ ಫೋಟೊಗಳನ್ನು ಪ್ರಿಂಟ್ ತೆಗೆದು, ವಿಡಿಯೋಗಳನ್ನು ಸಿಡಿಗೆ ಹಾಕಿ ನೀಡಿದ್ದೇನೆ. ಈ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65(ಬಿ) ಅಡಿಯಲ್ಲಿ ನಿಪಿ–15 ದೃಢೀಕರಣ ಪತ್ರ ವನ್ನು ನೀಡಿರುತ್ತೇನೆ. ನಿಪಿ–15(ಎ) ತನ್ನ ಸಹಿ ಆಗಿರುತ್ತದೆ. ತಾನು ಪ್ರಿಂಟ್ ತೆಗೆದ ಫೋಟೊಗಳು ನಿಪಿ–3 ಹಾಗೂ ನಿಪಿ–6 ಆಗಿರುತ್ತದೆ ಹಾಗೂ ಸಿಡಿ ನಿಪಿ–4 ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 36** –ಪ್ರಾಸಾ–15 ತಮ್ಮಯ್ಯ ರವರು ತನ್ನ ಸಾಕ್ಷ್ಯದಲ್ಲಿ ತಾನು 2019 ರಿಂದ 2023 ರವರೆಗೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿದ್ದೆ. ಈ ಪ್ರಕರಣದಲ್ಲಿ ತನಿಖಾಧಿಕಾರಿಗಳು ದಿನಾಂಕ 08–10–2022 ರಂದು ಆರೋಪಿಗಳನ್ನು ಪತ್ತೆ ಹಚ್ಚಲು ತನ್ನನ್ನು, ಚಾಸಾ–17, ಪ್ರಾಸಾ–13 ರವರನ್ನು ನೇಮಿಸಿದ್ದು, ಪೊಲೀಸ್ ಬಾತ್ಮೀದಾರರಿಂದ ಆರೋಪಿಗಳು ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲದಲ್ಲಿ ಇರುವುದಾಗಿ ಸಿಕ್ಕಿದ ಖಚಿತ ವರ್ತಮಾನದ ಮೇರೆಗೆ ತಾವು ದಿನಾಂಕ 09–10–2022 ರಂದು ಬೆಳಿಗ್ಗೆ

ಸಮಯ 5.00 ಗಂಟೆಗೆ ವಿಟ್ಲ ಬಸ್ ನಿಲ್ದಾಣದಲ್ಲಿ ಇರುವಾಗ ಎದುರುಗಡೆಯಿಂದ 1 ಹಾಗೂ 3ನೇ ಅರೋಪಿಗಳು ಬರುತಿದ್ದು, ಅವರನ್ನು ವಶಕ್ಕೆ ಪಡೆದುಕೊಂಡು ಮುಂದಿನ ಕ್ರಮದ ಬಗ್ಗೆ ಸಿದ್ದಾಪುರ ಪೊಲೀಸ್ ಠಾಣೆಗೆ 8.00 ಗಂಟೆಗೆ ತಲುಪಿ ನಿಪಿ-16 ವರದಿಯೊಂದಿಗೆ ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿರುತ್ತೇನೆ. ನಿಪಿ-16(ಎ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 37** -ಪ್ರಾಸಾ-15 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 05-11-2022 ರಂದು ಈ ಪ್ರಕರಣದ 2ನೇ ಆರೋಪಿ ರವೀಂದ್ರ ಅಲಿಯಾಸ್ ಅಪ್ಪು ರವರು ತನ್ನ ಸ್ವ-ಇಚ್ಛಾ ಹೇಳಿಕೆಯಲ್ಲಿ ಕೃತ್ಯದ ದಿನದಂದು ತಾನು ಧರಿಸಿದ್ದ ಬಟ್ಟೆಗಳನ್ನು ತನ್ನ ವಾಸದ ಮನೆಯ ಕಾಂಪೌಂಡಿನ ಪಕ್ಕದ ಕಾಫಿತೋಟದಲ್ಲಿ ಇರುವ ಪಾನುವಾಳದ ಮರದಲ್ಲಿ ಇಟ್ಟಿರುವುದಾಗಿ ಹೇಳಿದ್ದರಿಂದ ಸದರಿ ಬಟ್ಟೆಗಳನ್ನು ವಶಪಡಿಸಿಕೊಳ್ಳುವ ಸಲುವಾಗಿ ತನಿಖಾಧಿಕಾರಿಗಳು ತನ್ನನ್ನು, ಚಾಸಾ-16 ಹಾಗೂ ಚಾಸಾ-20 ರವರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿಗೆ ಪಂಚರನ್ನು ಬರಮಾಡಿಕೊಂಡು ಆರೋಪಿಯು ತೋರಿಸಿದ ಸ್ಥಳದಲ್ಲಿ ಹುಡುಕಲಾಗಿ ಯಾವುದೇ ಬಟ್ಟೆಗಳು ಪತ್ತೆಯಾಗಿರುವುದಿಲ್ಲ. ತನಿಖಾಧಿಕಾರಿಗಳ ಆದೇಶದಂತೆ ತಾನು ಆ ದಿನ ವಿಡಿಯೋ ಹಾಗೂ ಫೋಟೊಗಳನ್ನು ತೆಗೆದಿರುತ್ತೇನೆ. ಸದರಿ ದಿನಾಂಕದಂದು ನಿಪಿ-11 ಮಹಜರ್ ಮಾಡಿರುತ್ತಾರೆ. ನಿಪಿ-11(ಸಿ) ತನ್ನ ಸಹಿ ಆಗಿರುತ್ತದೆ. ತಾನು ತೆಗೆದ ಫೋಟೊಗಳು ನಿಪಿ-12 ಆಗಿರುತ್ತವೆ ಎಂದು ನುಡಿದಿರುತ್ತಾರೆ ಮತ್ತು ಸಾಕ್ಷ್ಯದ ಸಮಯ ಹಾಜರಿದ್ದ 1 ಮತ್ತ 3ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಾಕ್ಷ್ಯ ಸಮಯ 2ನೇ ಆರೋಪಿ ರವೀಂದ್ರ ನ್ಯಾಯಾಲಯದಲ್ಲಿ ಗೈರುಹಾಜರಾಗಿದ್ದು, ಅವರನ್ನು ಗುರುತಿಸಲು ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ಹೇಳಿದ ಕಾರಣ ಗುರುತಿಸಲಾಗಿದೆ ಎಂದು ಪರಿಗಣಿಸಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 38** –ಪ್ರಾಸಾ–16 ಡಾಃ ಪವನ್ ಚಂದ್ ಶೆಟ್ಟಿರವರು ತನ್ನ ಸಾಕ್ಷ್ಯದಲ್ಲಿ ತಾನು 2011 ಇಸವಿಯಿಂದ KMC ಮಂಗಳೂರಿನಲ್ಲಿ Forensic Medicine Department ನಲ್ಲಿ Associate Professor ಆಗಿ ಕೆಲಸ ಮಾಡುತ್ತಿದ್ದೇನೆ. ದಿನಾಂಕ 30–09–2022 ರಂದು ಬೆಳಗ್ಗೆ 4.00 ಗಂಟೆಗೆ ಯಶೋಧರ ಬಿ. ಪ್ರಾಸಾ–1 ದಿನಾಂಕ 28–09–2022 ರಂದು ಬೆಳಗ್ಗೆ 8.30 ಗಂಟೆಗೆ ಹಲ್ಲೆಗೊಳಗಾದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಬಂದಾಗ ತಾನು ಅವರನ್ನು ಪರೀಕ್ಷೆ ಮಾಡಿದಾಗ ಅವರ ದೇಹದಲ್ಲಿ ಈ ಕೆಳಗಿನ ಗಾಯಗಳು ಇದ್ದವುಃ–

1. Laceration measuring 3 x 5 cm X muscle deep present at left dorsal forearm.
2. Laceration measuring 6 X 2 cm X muscle deep present at left dorsal forearm.
3. Laceration measuring 3 X 2 cm muscle deep present at radial border of left forearm.
4. Laceration measuring 9 X 2cm muscle deep present at ventral border of left proximal forearm.
5. Laceration measuring 2X1 cm muscle deep present on the dorsal aspect of left thumb.
6. Laceration measuring 3X 1 cm X muscle deep present on the dorsal aspect of right forearm.
7. Laceration measuring 4X 1cm X muscle deep present on the dorsal aspect of the right forearm.
8. Laceration measuring 2X 1cm X muscle deep present over the right elbow.

9. Swelling deformity associated with cerpitus was present over the left forearm suggestive of fracture of left radias and ulna (shown in left forearm X-ray) ಎಂದು ನುಡಿದಿರುತ್ತಾರೆ.

ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 39** –ಪ್ರಾಸಾ–16 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಮೇಲೆ ಹೇಳಿದ ಗಾಯಗಳ ಪೈಕಿ 9ನೇ ಗಾಯ ತೀವ್ರ ಸ್ವರೂಪಾದ ಗಾಯವಾಗಿದ್ದು, 1 ರಿಂದ 8ನೇ ಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಈ ಬಗ್ಗೆ ನಿಪಿ–17 ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ನಿಪಿ–17(ಎ) ತನ್ನ ಸಹಿ ಆಗಿರುತ್ತದೆ. ಗಾಯದ ಪ್ರಮಾಣ ಪತ್ರದ ಜೊತೆಗೆ ನಿಪಿ–18 3 x-ray ಗಳನ್ನು ಕಳುಹಿಸಿ ಕೊಟ್ಟಿದ್ದೆ. ಒಬ್ಬ ವ್ಯಕ್ತಿಗೆ ಕತ್ತಿಯಿಂದ ಹಲ್ಲೆ ಮಾಡಿದರೆ ನಿಪಿ–17 ರಲ್ಲಿ ಉಲ್ಲೇಖ ಮಾಡಿದ ಗಾಯಗಳು ಆಗುವ ಸಾಧ್ಯತೆ ಇದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 40** –ಪ್ರಾಸಾ–17 ಡಾಃ ರಾಧಾ ಎಸ್. ರವರು ತನ್ನ ಸಾಕ್ಷ್ಯದಲ್ಲಿ ತಾನು 2011ನೇ ನವೆಂಬರ್ ತಿಂಗಳಿನಿಂದ ಆರ್.ಎಫ್.ಎಸ್.ಎಲ್., ಮೈಸೂರಿನಲ್ಲಿ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು, ಏಪ್ರಿಲ್ 2020ರಿಂದ ಸಹಾಯಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ತಾನು ಕಳೆದ ಹದಿನೆಂಟುವರೆ ವರ್ಷಗಳಿಂದ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ವೈಜ್ಞಾನಿಕ ಅಧಿಕಾರಿ, ಹಿರಿಯ ವೈಜ್ಞಾನಿಕ ಅಧಿಕಾರಿ ಹಾಗೂ ಸಹಾಯ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತಾನು ನವದೆಹಲಿಯ ಎನ್ .ಐ.ಸಿ.ಎಫ್.ಎಸ್. ನಲ್ಲಿ ನ್ಯಾಯ ವಿಜ್ಞಾನದ ಬಗ್ಗೆ 3 ತಿಂಗಳ ಕಾಲ ಬುನಾದಿ ತರಬೇತಿ ಮತ್ತು ಅದೇ ಸಂಸ್ಥೆಯಿಂದ ಒಂದು ತಿಂಗಳ ಅವಧಿಯ ಡಿ.ಎನ್.ಎ., ಪ್ರೊಫೈಲಿಂಗ್ ಬಗ್ಗೆ ತರಬೇತಿಯನ್ನು ಪಡೆದಿರುತ್ತೇನೆ. ತನ್ನ ಸೇವಾ ಅವಧಿಯಲ್ಲಿ ಸುಮಾರು 10000

ಪ್ರಕರಣಗಳ ವಿಶ್ಲೇಷಣೆ ಮಾಡಿ, ವರದಿಯನ್ನು ನೀಡಿದ ಸುಮಾರು 2000 ನ್ಯಾಯಾಲಯಗಳ ಪ್ರಕರಣಗಳಲ್ಲಿ ಸಾಕ್ಷಿದಾರರಾಗಿ ಸಾಕ್ಷಿಗಳನ್ನು ನುಡಿದಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 41** –ಪ್ರಾಸಾ–17 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ 11–10–2022 ರಂದು ತಮ್ಮ ಕಛೇರಿಯ ಸ್ವಾಗತ ವಿಭಾಗದವರು ಈ ಪ್ರಕರಣಕ್ಕೆ ಸಂಬಂಧಿಸಿದ ಮೊಕದ್ದಮ್ಮೆ ಸಂಖ್ಯೆಃ 38/2022ರಲ್ಲಿ 5 ಸೀಲಾದ ವಸ್ತುಗಳನ್ನು ಸಿದ್ಧಾಪುರ ಪೊಲೀಸ್ ಠಾಣಾ ಸಿಬ್ಬಂದಿ ಕೃಷ್ಣ ಮೂರ್ತಿ ರವರಿಂದ ಸ್ವೀಕರಿಸಲಾಗಿದ್ದು, ಅದಕ್ಕೆ RFSLMYS/FLMS/BS/611/2022 ಎಂದು ನಂಬರ್ ನೀಡಿ, ತಮ್ಮ ವಿಭಾಗಕ್ಕೆ ಕಳುಹಿಸಿರುತ್ತಾರೆ. ಸದರಿ ವಸ್ತುಗಳ ಮೇಲೆ ಇದ್ದ ಸೀಲುಗಳು ಮಾದರಿ ಸೀಲಿನೊಂದಿಗೆ ಹೋಲಿಕೆ ಆಗುತ್ತಿತ್ತು. ಸದರಿ ವಸ್ತುಗಳನ್ನು ಜೀವಶಾಸ್ತ್ರ ವಿಭಾಗಕ್ಕೆ ಪರೀಕ್ಷೆಗಾಗಿ ಕಳುಹಿಸಿದ್ದರು. ಸದರಿ ವಸ್ತುಗಳಿಗೆ I.O marking ನ್ನೇ ನೀಡಲಾಗಿರುತ್ತದೆ. ಸದರಿ ವಸ್ತುಗಳುಃ– 1) Mud, 2) Sample Mud, 3) One Jeans pant, 4) One T–shirt, 5) One Jeans pant ಆಗಿರುತ್ತವೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 42** –ಪ್ರಾಸಾ–17 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಸದರಿ ವಸ್ತುಗಳನ್ನು ದಿನಾಂಕ 11–10–2022 ರಿಂದ 13–10–2022 ರವರಗೆ ರಾಸಾಯನಿಕ ಹಾಗೂ serological ಪರೀಕ್ಷೆಗೆ ಒಳಪಡಿಸಿ ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತೇನೆಃ–

1. Blood stain was detected in Article No.1, 3, 4 and 5.
2. Blood stain was not detected in Article No.2.
3. Article No.1, 3, 4 and 5 was stained with human blood.

4. Article No.1, 3, 4 and 5 was stained with O group blood. ಅದರಂತೆ ತಾನು ತನಿಖಾಧಿಕಾರಿಗೆ ತನ್ನ ನಿಪಿ-19 ವರದಿಯನ್ನು ಕಳುಹಿಸಿಕೊಟ್ಟಿದ್ದು ಅದಕ್ಕೆ ಡಿಜಿಟಲ್ ಸಹಿ ಹಾಕಿದ್ದೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ 43** -ಪ್ರಾಸಾ-17 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ 21-10-2022 ರಂದು ತಮ್ಮ ಕಛೇರಿಯ ಸ್ವಾಗತ ವಿಭಾಗದವರು ಈ ಪ್ರಕರಣಕ್ಕೆ ಸಂಬಂಧಿಸಿದ ಮೊಕದ್ದಮ್ಮೆ ಸಂಖ್ಯೆಃ 38/2022ರಲ್ಲಿ 7 ಸೀಲಾದ ವಸ್ತುಗಳನ್ನು ಸಿದ್ದಾಪುರ ಪೊಲೀಸ್ ಠಾಣಾ ಸಿಬ್ಬಂದಿ ರಾಜೇಶ್ವರಿ ರವರಿಂದ ಸ್ವೀಕರಿಸಲಾಗಿದ್ದು, ಅದಕ್ಕೆ RFSLMYS/FLMS/BS/643/2022 ಎಂದು ನಂಬರ್ ನೀಡಿ, ತಮ್ಮ ವಿಭಾಗಕ್ಕೆ ಕಳುಸಿರುತ್ತಾರೆ. ಸದರಿ ವಸ್ತುಗಳ ಮೇಲೆ ಇದ್ದ ಸೀಲುಗಳು ಮಾದರಿ ಸೀಲಿನೊಂದಿಗೆ ಹೋಲಿಕೆ ಆಗುತ್ತಿತ್ತು. ಸದರಿ ವಸ್ತುಗಳನ್ನು ಜೀವಶಾಸ್ತ್ರ ವಿಭಾಗಕ್ಕೆ ಪರೀಕ್ಷೆಗಾಗಿ ಕಳುಹಿಸಿದ್ದರು. ಸದರಿ ವಸ್ತುಗಳಿಗೆ I.O marking ನ್ನೇ ನೀಡಲಾಗಿರುತ್ತದೆ. ಸದರಿ ವಸ್ತುಗಳು ಈ ಕೆಳಕಂಡಂತೆ ಇರುತ್ತವೆಃ-
1) One jeans pant, 2) One T-shirt , 3) One pant, 4) One T-shirt, 5) One sickle (Machu) , 6) One sickle (Machu), 7) one Sickle (Kathi) ಆಗಿರುತ್ತವೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ 44** -ಪ್ರಾಸಾ-17 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಸದರಿ ವಸ್ತುಗಳನ್ನು ದಿನಾಂಕ 25-10-2022 ರಿಂದ 27-10-2022 ರವರಗೆ ರಾಸಾಯನಿಕ ಹಾಗೂ serological ಪರೀಕ್ಷೆಗೆ ಒಳಪಡಿಸಿ ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತೇನೆಃ-

1. Blood stain was detected in Article No. 1, 2, 3, 4, 5, 6 and 7.

2. Article No.1, 2 and 7 were stained with human blood.

3. Blood stains in Article No.3, 4, 5 and 6 were insuffient for serological examination .

4. Article No.1, 2, and 7 were stained with O group blood. ಅದರಂತೆ ನಿಪಿ-20 ವರದಿಯನ್ನು ಕಳುಹಿಸಿಕೊಟ್ಟಿದ್ದು ಅದಕ್ಕೆ ಡಿಜಿಟಲ್ ಸಹಿ ಹಾಕಿದ್ದೇನೆ. ಪರೀಕ್ಷೆ ಆದ ನಂತರ ಎಲ್ಲಾ ವಸ್ತುಗಳನ್ನು ಮರು ಪ್ಯಾಕ್ ಮಾಡಿ, ಸೀಲು ಮಾಡಿ ಮಾದರಿ ಸೀಲಿನ ಜೊತೆ ಸಂಬಂಧಪಟ್ಟ ಪೊಲೀಸರಿಗೆ ಕಳುಹಿಸಿಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 45** –ಪ್ರಾಸಾ-17 ರವರು ನ್ಯಾಯಾಲಯದಲ್ಲಿ ಮು.ಮಾ-1 ರಿಂದ 8, 10 ರಿಂದ 13 ನ್ನು ನೋಡಿ ಅವುಗಳನ್ನು ತಾನು ಪರೀಕ್ಷೆ ಮಾಡಿದ್ದೆ ಎಂದು ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 46** –ಪ್ರಾಸಾ-18 ಡಾಃ ದೀಪ ಅಡಿಗ ರವರು ತನ್ನ ಸಾಕ್ಷ್ಯದಲ್ಲಿ ತಾನು ಆಗಸ್ಟ್ 2010 ರಿಂದ Kasturba Medical College ನಲ್ಲಿ consultant Pathologist ಆಗಿ ಕೆಲಸ ಮಾಡುತ್ತಿದ್ದೇನೆ. ದಿನಾಂಕ 30-09-2022 ರಂದು ಯಶೋಧರ ಎಂಬುುವವರ ರಕ್ತದ ಮಾದರಿಯನ್ನು ಪರೀಕ್ಷಿಸಿ ವರದಿ ನೀಡುವಂತೆ ಡಾಃ ಆತ್ಮಾನಂದ ಎಸ್ ಹೆಗಡೆ ಅವರಿಂದ ಕೋರಿಕೆ ಬಂದಿದ್ದು, ಅದರಂತೆ ತಾನು ಅದೇ ದಿನ ಅದನ್ನು ಪರಿಶೀಲಿಸಿ ಸದರಿ ರಕ್ತದ ಮಾದರಿ O Positive ಎಂದು ನಿಪಿ-21 ವರದಿ ನೀಡಿದ್ದೇನೆ. ನಿಪಿ-21(ಎ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 47** –ಪ್ರಾಸಾ–19 ಡಾಃ ರಾಘವೇಂದ್ರ ರವರು ತನ್ನ ಸಾಕ್ಷ್ಯದಲ್ಲಿ ತಾನು ಜುಲೈ 2022 ರಿಂದ ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ದಿನಾಂಕ 28–09–2022 ರಂದು ಬೆಳಗ್ಗೆ 9.00 ಗಂಟೆಗೆ ಪ್ರಾಸಾ–1 ಪ್ರಭುಶೇಖರ , ಅಪ್ರು ರವೀಂದ್ರ, ಆನಂದ್ ರಘು ಎಂಬುವವರಿಂದ ಲಾಂಗ್ ಹಾಗೂ ಕತ್ತಿಯಿಂದ ಅದೇ ದಿನ ಅರೆಕಾಡು ಹೋಟೆಲ್ ಬಳಿ ಹಲ್ಲೆಗೊಳಗಾದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು, ತಾನು ಅವರನ್ನು ಪರೀಕ್ಷಿಸಿದಾಗ ಅವರ ದೇಹದಲ್ಲಿ ಈ ಕೆಳಗಿನ ಗಾಯಗಳು ಇದ್ದವುಃ–

1. Cut right axilla 3cm bleeding present.
2. Cut right thenar 3cm and muscle depth bleed present.
3. Cut right upper lateral forearm 3cm x muscle deep bleeding present.
4. Cut index forefinger dorsum 5cm bleeding present.
5. Cut right wrist 2cm bleeding present.
6. Scratch abrasion 3cm verticle right lower forearm dorsum.
7. Abrasion left temple 4cm long.
8. Cut left forearm upper end 9cm with fracture of bone with bleeding
9. Cut left forearm lower end laterally 4cm with clots present.
10. Cut left forearm dorsum in the middle 5cm with the flap with clots present.
11. Cut left forearm dorsum lower end 4cm with a flap.
12. Cut right upper lateral thigh 3cm with flap and bleeding present.

13. Abrasion right upper lateral thigh 8cm X 5cm verticle 16cm obliquly over lower 1/3.
14. Abrasion left lateral foreleg in the upper region 1.5cm.
15. Scratch abrasion right upper scapula 12 cm curved and horizontally upto and across deltoid.
16. Cut horizontally 5cm lower lumber spine clot present.
17. Cut right lateral elbow 1cm with clot ಎಂದು ನುಡಿದಿರುತ್ತಾರೆ.

ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 48** –ಫ್ರಾಸಾ–19 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ತನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಗಾಯಗಳ ಪೈಕಿ 8 ನೇ ಗಾಯ ತೀವ್ರ ಸ್ವರೂಪದ ಗಾಯವಾಗಿದ್ದು, ಉಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿವೆ. ಅದರಂತೆ ನಿಪಿ–22 ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ನಿಪಿ–22(ಎ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 49** –ಫ್ರಾಸಾ–19 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಅದೇ ಸಮಯಕ್ಕೆ ಫ್ರಾಸಾ–2 ರವರು ಅದೇ ದಿನ 2ನೇ ಆರೋಪಿ ಅಪ್ಪು ರವೀಂದ್ರ ಅವರಿಂದ ಲಾಂಗ್ ಮಚ್ಚಿನಿಂದ ಅರೆಕಾಡು ಹೋಟೆಲ್ ನಲ್ಲಿ ಹಲ್ಲೆಗೊಳಗಾದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು ತಾನು ಅವರನ್ನು ಪರೀಕ್ಷಿಸಿದಾಗ ಈ ಕೆಳಗಿನ ಗಾಯಗಳು ಕಂಡುಬಂದಿದ್ದವುಃ– 1. Cut right leg lower end laterally over the thigh 5 cm X long with bleeding and horizontally. ಮಡಿಕೇರಿ ಜಿಲ್ಲಾ ಆಸ್ಪತ್ರೆಯ x–ray ವರದಿಯಂತೆ ಯಾವುದೇ ಮೂಳೆ ಮುರಿತ ಇದ್ದಿರುವುದಿಲ್ಲ. ತನ್ನ ಪ್ರಕಾರ ಫ್ರಾಸಾ–1 ರವರಿಗೆ ಆದ

ಗಾಯಗಳು ಸಾಮಾನ್ಯ ಸ್ವರೂಪದ ಗಾಯವಾಗಿದ್ದು ನಿಪಿ–23 ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ನಿಪಿ–23(ಎ) ತನ್ನ ಸಹಿ ಆಗಿರುತ್ತದೆ. ಫ್ರಾಸಾ–1 ಹಾಗೂ 2 ರವರನ್ನು ತಾನು ಮೊದಲು ಪರೀಕ್ಷಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೇಲ್ದರ್ಜೆ ಆಸ್ಪತ್ರೆಗೆ ಕಳುಹಿಸಿರುತ್ತ್ೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ 50** –ಫ್ರಾಸಾ–19 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 12–10–2022 ರಂದು ಸಿದ್ದಾಪುರ ಪೊಲೀಸರು ಪಿಸಿ–48 ರವರೊಂದಿಗೆ ಸೀಲು ಮಾಡಿದ್ದ ಒಂದು 16 ಇಂಚು ಉದ್ದದ ಮರದ ಹಿಡಿ ಇರುವ ಕಬ್ಬಿಣದ ಕೊಕ್ಕೆ ಕತ್ತಿ, 16 ಇಂಚು ಉದ್ದದ ಮರದ ಹಿಡಿ ಇರುವ ಕಬ್ಬಿಣದ ಉದ್ದದ ಕೊಕ್ಕೆ ಕತ್ತಿ, 17.5 ಇಂಚು ಉದ್ದ ಇರುವ ಮರದ ಹಿಡಿ ಇರುವ ಕಬ್ಬಿಣದ ಮಂಡೆ ಕತ್ತಿಯನ್ನು ಹಾಜರುಪಡಿಸಿ ಗಾಯದ ಪ್ರಮಣ ಪತ್ರದಲ್ಲಿ ಉಲ್ಲೇಖ ಇರುವ ಗಾಯಗಳು ಸದರಿ ವಸ್ತುಗಳಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇದೆಯೋ ಎಂಬಂತೆ ಅಭಿಪ್ರಾಯ ಕೇಳಿದ್ದು, ತಾನು ಅವುಗಳನ್ನು ಪರೀಕ್ಷಿಸಿ ಅವುಗಳಿಂದ ಹಲ್ಲೆ ಮಾಡಿದರೆ ಸದರಿ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿದ ಗಾಯ ಆಗುವ ಸಾಧ್ಯತೆ ಇದೆ ಎಂದು ನಿಪಿ–24 ರಂತೆ ಅಭಿಪ್ರಾಯ ನೀಡಿದ್ದೇನೆ. ನಿಪಿ–24(ಎ) ತನ್ನ ಸಹಿ ಆಗಿರುತ್ತದೆ. ಪರೀಕ್ಷೆ ಆದ ಬಳಿಕ ಸದರಿ ಆಯುಧಗಳನ್ನು ಪುನಃ ಪ್ಯಾಕ್ ಮಾಡಿ ಸಂಬಂಧ ಪಟ್ಟ ಪೊಲೀಸರಿಗೆ ಕಳುಹಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ 51** –ಫ್ರಾಸಾ–19 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ30–09–2022 ರಂದು ಫ್ರಾಸಾ–2 ರವರ ರಕ್ತದ ಗುಂಪಿನ ಬಗ್ಗೆ ಪೊಲೀಸರು ಮಾಹಿತಿ ಕೇಳಿದ್ದು, ತಾನು ತಮ್ಮ ಪ್ರಯೋಗಲಾಯದಲ್ಲಿ ಪರೀಕ್ಷಿಸಿ ಅವರ ರಕ್ತದ ಮಾದರಿ O Positive ಎಂದು ನಿಪಿ–25 ರಂತೆ ವರದಿ ನೀಡಿದ್ದೇನೆ. ನಿಪಿ–25(ಎ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ 52** –ಪ್ರಾಸಾ–19 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ05–11–2022 ರಂದು ಸಿದ್ದಾಪುರ ಠಾಣೆಯಿಂದ ರವೀಂದ್ರ ರವರ ರಕ್ತದ ಮಾದರಿಯನ್ನು ಪರೀಕ್ಷಿಸಿ ವರದಿಯನ್ನು ಕೋರಿದ್ದು, ತಾನು ಅವರನ್ನು ಪರೀಕ್ಷಿಸಿ ಅವರ ರಕ್ತದ ಮಾದರಿ B Positive ಎಂದು ನಿಪಿ–26 ರಂತೆ ವರದಿ ನೀಡಿರುತ್ತೇನೆ. ನಿಪಿ–26(ಎ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ತಾನು ಪರೀಕ್ಷೆ ಮಾಡಿದ ಆಯುಧಗಳು ಮು.ಮಾ–3 ರಿಂದ 5 ಎಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ 53** –ಪ್ರಾಸಾ–20 ಮೋಹನ್ ಕೆ.ಪಿ ರವರು ತನ್ನ ಸಾಕ್ಷ್ಯದಲ್ಲಿ ತಾನು 2019 ರಿಂದ 2024 ರವರೆಗೆ ಸಿದ್ಧಾಪುರ ಪೊಲೀಸ್ ಠಾಣೆಯಲ್ಲಿ ಎಎಸ್ ಐ ಆಗಿ ಕೆಲಸ ಮಾಡಿದ್ದೆ. ದಿನಾಂಕ 28–09–2022 ರಂದು ಠಾಣೆಯಲ್ಲಿ ಇದ್ದಾಗ ಪಿಎಸ್ ಐ ಅವರು ತನ್ನನ್ನು ಕರೆದು ಅರೆಕಾಡು ನಿವಾಸಿ ಯಶೋಧರ ಹಾಗೂ ಚಂದನ್ ರವರು ಮಡಿಕೇರಿ ಸರ್ಕಾರಿ ಆಸ್ಪತ್ರೆಯಲ್ಲಿ ಹೊಡೆದಾಟದಲ್ಲಿ ಗಾಯಗೊಂಡು ದಾಖಲಾಗಿರುತ್ತಾರೆ ಅವರ ಹೇಳಿಕೆಯನ್ನು ಪಡೆದುಕೊಂಡು ಬರಲು ಆದೇಶಿಸಿದ ಮೇರೆಗೆ ತಾನು ಮಡಿಕೇರಿ ಸರ್ಕಾರಿ ಆಸ್ಪತ್ರೆಯ ತುರ್ತು ನಿಗಾ ಘಟಕಕ್ಕೆ ಹೋಗಿ ಪ್ರಾಸಾ–1 ಹಾಗೂ ಪ್ರಾಸಾ–2 ರವರನ್ನು ವಿಚಾರಣೆ ಮಾಡಿ ಪ್ರಾಸಾ–1 ರವರ ನಿಪಿ–1 ಹೇಳಿಕೆಯನ್ನು ಸಮಯ ಮಧ್ಯಾಹ್ನ 12.15ಯಿಂದ 1.00 ಗಂಟೆಯ ವರೆಗೆ ಪಡೆದು ಠಾಣೆಗೆ ಬಂದು ಪಿಎಸ್ ಐ ರವರಿಗೆ ಹೇಳಿಕೆಯನ್ನು ನೀಡಿ ಮುಂದಿನ ಕ್ರಮದ ಬಗ್ಗೆ ನಿವೇದಿಸಿಕೊಂಡಿರುತ್ತೇನೆ. ನಿಪಿ–1(ಬಿ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ 54** –ಪ್ರಾಸಾ–21 ಮೋಹನ್ ರಾಜ್ ರವರು ತನ್ನ ಸಾಕ್ಷ್ಯದಲ್ಲಿ ತಾನು ಏಪ್ರಿಲ್–2020 ರಿಂದ ಜೂನ್–2023 ರವರೆಗೆ ಸಿದ್ಧಾಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೆ. ದಿನಾಂಕ 28–09–2022 ರಂದು ತಾನು

ಠಾಣಾ ಪ್ರಭಾರದಲ್ಲಿ ಇದ್ದಾಗ ಮಧ್ಯಾಹ್ನ 2.00 ಗಂಟೆಗೆ ಠಾಣಾ ಸಿಬ್ಬಂದಿಯಾದ ಪ್ರಾಸಾ–20 ರವರು ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ ಪ್ರಾಸಾ–1 ರವರ ಹೇಳಿಕೆಯನ್ನು ಪಡೆದು ತಂದು ತನ್ನ ಮುಂದೆ ಹಾಜರುಪಡಿಸಿದ್ದನ್ನು ನಿಪಿ–1 ರಂತೆ ಸ್ವೀಕರಿಸಿ ಠಾಣಾ ಮೊಕದಮ್ಮೆ ಸಂಖ್ಯೆ: 38/2022 ರಂತೆ ನಿಪಿ–28 ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಅದನ್ನು ಸಿಬ್ಬಂದಿಯ ಮೂಲಕ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆನು. ನಿಪಿ–1(ಸಿ) ಮತ್ತು ನಿಪಿ–28(ಎ) ತನ್ನ ಸಹಿಗಳು ಆಗಿರುತ್ತವೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 55** –ಪ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಅದೇ ದಿನ ಕೃತ್ಯ ನಡೆದ ಸ್ಥಳವಾದ ಅರೆಕಾಡು ಗ್ರಾಮದ ಎಂ.ಎಸ್.ಟಿ ಹೋಟೆಲ್ ಕಟ್ಟಡಕ್ಕೆ ತೆರಳಿ ಅಲ್ಲಿ ಹಾಜರಿದ್ದ ಪ್ರತ್ಯಕ್ಷದರ್ಶಿಯಾದ ಪ್ರಾಸಾ–2 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಪಂಚರಾದ ಪ್ರಾಸಾ–5 ಮತ್ತು ಪ್ರಾಸಾ–6 ರವರ ಸಮಕ್ಷಮ ಸಂಜೆ 4.00 ಗಂಟೆಯಿಂದ 5.00 ಗಂಟೆಯವರೆಗೆ ನಿಪಿ–2 ರಂತೆ ಪಂಚನಾಮ ಕ್ರಮವನ್ನು ಜರುಗಿಸಿದೆನು. ಎಂ.ಎಸ್.ಟಿ ಹೋಟೆಲ್ ನ್ನು ಪ್ರವೇಶಿಸಿದಾಗ 13 X 7 ಅಡಿ ಉದ್ದ–ಅಗಲದ ಹಾಲ್ ನಲ್ಲಿ ಮೊದಲ ಕೃತ್ಯ ನಡೆದಿದ್ದು, ನಂತರ ಗಾಯಾಳು ಪ್ರಾಸಾ–1 ಹಿಂಬಾಗಿಲಿನ ಮೂಲಕ ಹೊರ ಹೋದ ಸಂದರ್ಭದಲ್ಲಿ ಎರಡನೇ ಬಾರಿಗೆ ಪ್ರಾಸಾ–1 ರವರ ಮೇಲೆ ಹೋಟೆಲ್ ನ ಹಿಂಭಾಗ ಹಲ್ಲೆ ಆಗಿದ್ದು, ಸದರಿ ಸ್ಥಳದಲ್ಲಿ ಪ್ರಾಸಾ–1 ಕುಸಿದು ಬಿದ್ದಿದ್ದು, ಸದರಿ ಸ್ಥಳದ ಮಣ್ಣಿನ ಮೇಲೆ ರಕ್ತದ ಕಲೆಗಳು ಕಂಡು ಬಂದಿದ್ದು, ರಕ್ತವಿರುವ ಮಣ್ಣನ್ನು ಹಾಗೂ ಮಾದರಿ ಮಣ್ಣನ್ನು ಪ್ರತ್ಯೇಕ–ಪ್ರತ್ಯೇಕವಾಗಿ ಬಿಳಿ ಚೀಲಕ್ಕೆ ಹಾಕಿ, ಸೀಲು ಮಾಡಿ, ವಶಕ್ಕೆ ಪಡೆದೆನು. ನಂತರ ಪ್ರಾಸಾ–2 ರವರು ಹೋಟೆಲ್ ಮುಂಭಾಗಕ್ಕೆ ತನ್ನನು ಹಾಗೂ ಪಂಚರನ್ನು ಕರೆದುಕೊಂಡು ಬಂದು ಹೋಟೆಲ್ ನ ಮುಂಭಾಗದಲ್ಲಿ ಇದ್ದ ಮಹೇಂದ್ರ ಜೀಪ್ ಸಂಖ್ಯೆ KA–31–M–0210 ನ್ನು ತೋರಿಸಿ, ಪ್ರಾಸಾ–1 ಹಾಗೂ 2 ರವರಿಗೆ ಆರೋಪಿಗಳು ಹಲ್ಲೆ ಮಾಡಿದ ನಂತರ ತಮ್ಮ ಕೈಯಲ್ಲಿ ಇದ್ದ ಮಚ್ಚಿನಿಂದ ಜೀಪಿನ

ಮುಂಭಾಗದ ಗಾಜಿನ್ನು ಒಡೆದು ಜಖಂಗೊಳಿಸಿರುವುದಾಗಿ ತಿಳಿಸಿದ ಮೇರೆಗೆ ತಾನು ಅದನ್ನು ಪರಿಶೀಲನೆ ಮಾಡಿದಾಗ ಜೀಪಿನ ಮುಂಭಾಗದ ಗಾಜು ಪುಡಿಪುಡಿಯಾಗಿರುವುದು ಕಂಡು ಬಂತು. ನಂತರ ಜೀಪಿನ ಬಾನೇಟ್ ಮೇಲೆ ಬಿದ್ದಿದ್ದ ಪುಡಿಯಾದ ಗಾಜಿನ ಚೂರನ್ನು ತನಿಖೆಗಾಗಿ ಒಂದು ಪ್ಲಾಸ್ಟಿಕ್ ಡಬ್ಬಕ್ಕೆ ಹಾಕಿ, ಬಿಳಿ ಬಟ್ಟೆಯಿಂದ ಸುತ್ತಿ, ಸೀಲು ಮಾಡಿ ವಶಕ್ಕೆ ಪಡೆದಿರುತ್ತೇನೆ. ಸದರಿ ಜೀಪು ಪ್ರಾಸಾ–1 ರವರಿಗೆ ಸೇರಿದ್ದಾಗಿರುತ್ತದೆ. ನಂತರ ಜೀಪು ತನಿಖೆಗೆ ಅವಶ್ಯಕತೆ ಇದ್ದದ್ದರಿಂದ ಮುಂದಿನ ಕ್ರಮಕ್ಕಾಗಿ ಜೀಪನ್ನು ವಶಕ್ಕೆ ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 56**–ಪ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ನಿಪಿ–2 ರಲ್ಲಿರುವ ನಿಪಿ–2(ಡಿ) ತನ್ನ ಸಹಿ ಆಗಿರುತ್ತದೆ. ಪ್ರಾಸಾ–14 ರವರಿಂದ ನಿಪಿ–3 ರಂತೆ ಸ್ಥಳದ 3 ಫೋಟೊಗಳನ್ನು ತೆಗೆಸಿರುತ್ತೇನೆ. ನಿಪಿ–3 ರ 3ನೇ ಫೋಟೊದಲ್ಲಿ ಜಖಂಗೊಂಡ ಜೀಪು ಕಾಣುತ್ತದೆ ಎಂದು ನುಡಿದಿರುತ್ತಾರೆ. ಮು.ಮಾ–7 ರಿಂದ 9 ರಕ್ತದ ಕಲೆ ಇರುವ ಮಣ್ಣು, ಮಾದರಿ ಮಣ್ಣು ಹಾಗೂ ಜೀಪಿನ ಮುಂಭಾಗದ ಗ್ಲಾಸಿನ ಚೂರನ್ನು ನ್ಯಾಯಾಲಯದಲ್ಲಿ ನೋಡಿ ಅವುಗಳನ್ನೇ ತಾನು ಸ್ಥಳದಿಂದ ವಶಪಡಿಸಿದ್ದಾಗಿ ಗುರುತಿಸಿರುತ್ತಾರೆ. ಸದರಿ ಮಹಜರ್ ನ್ನು ತಾನು ಚಾಸಾ–20 ರವರಿಂದ ಬರೆಸಿದ್ದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 57** –ಪ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಠಾಣೆಗೆ ವಾಪಸ್ಸು ಬಂದು ಕೃತ್ಯ ಸ್ಥಳದಲ್ಲಿ ವಶಪಡಿಸಿಕೊಂಡಿದ್ದ ಸ್ವತ್ತುಗಳನ್ನು ಸ್ವತ್ತುಪಟ್ಟಿಯಲ್ಲಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆನು. ನಂತರ ಪ್ರಾಸಾ–2 ರವರಿಗೆ ಪ್ರಾಸಾ–1 ಮತ್ತು 2 ರವರು ಕೃತ್ಯ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಹಾಜರುಪಡಿಸುವಂತೆ ತಿಳಿಸಿ, ನೋಟಿಸ್ಸು ಜಾರಿ ಮಾಡಿದೆನು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 58** –ಪ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ನಂತರ ದಿನಾಂಕ 29–09–2022 ರಂದು ಬೆಳಿಗ್ಗೆ 10.00 ಗಂಟೆಗೆ ಪ್ರಾಸಾ–2 ರವರು ಠಾಣೆಗೆ ಹಾಜರಾಗಿ ಕೃತ್ಯ ಸ್ಥಳದಲ್ಲಿ ತಾನು ಹಾಗೂ ಪ್ರಾಸಾ–1 ರವರು ಘಟನಾ ಸಂದರ್ಭ ಧರಿಸಿದ್ದ ಬಟ್ಟೆಗಳು ಮು.ಮಾ–1, 2 ಹಾಗೂ 6 ಇವೇ ಎಂದು ತನ್ನ ಮುಂದೆ ಹಾಜರುಪಡಿಸಿದ್ದು, ಅವುಗಳನ್ನು ವಶಪಡಿಸಿಕೊಳ್ಳುವ ಸಲುವಾಗಿ ಪಂಚರಾದ ಪ್ರಾಸಾ–5 ಹಾಗೂ 6 ರವರನ್ನು ಠಾಣೆಗೆ ಬರಮಾಡಿಕೊಂಡು ಅವರಿಗೆ ಈ ಪ್ರಕರಣದ ಮಾಹಿತಿಯನ್ನು ತಿಳಿಸಿ ಪಂಚರಾಗಿ ಸಹಕರಿಸುವಂತೆ ನೋಟಿಸ್ಸನ್ನು ಜಾರಿ ಮಾಡಿದೆನು. ಅವರು ಒಪ್ಪಿದ ನಂತರ ಪ್ರಾಸಾ–2 ರವರು ಹಾಜರುಪಡಿಸಿದ್ದ ಬಟ್ಟೆಗಳನ್ನು ಪರಿಶೀಲಿಸಿದಾಗ ಅವುಗಳ ಪೈಕಿ ಒಂದು ರಕ್ತದ ಕಲೆ ಇರುವ ಕಪ್ಪು ಬಣ್ಣದ ಜೀನ್ಸ್ ಪ್ಯಾಂಟ್ ಆಗಿದ್ದು, ಅದರ ಬಲಗಾಲಿನ ಮುಂಭಾಗದಲ್ಲಿ ಹರಿದಿತ್ತು. ಇನ್ನೊಂದು ತಿಳಿ ಹಸಿರು ಬಣ್ಣದ ರಕ್ತಸಿಕ್ತ ಅರ್ಧ ತೋಳಿನ ಟಿ–ಶರ್ಟ್ ಆಗಿದ್ದು, ಅದರ ಮುಂಭಾಗ ಹಾಗೂ ಎರಡು ಕೈಗಳ ಭಾಗ ಹರಿದಿತ್ತು. ಮೂರನೇಯ ಬಟ್ಟೆ ರಕ್ತದ ಕಲೆ ಇರುವ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಆಗಿದ್ದು, ಅದರ ಬಲಕಾಲಿನ ಅರ್ಧ ಭಾಗವು ಕಟ್ ಮಾಡಿ ತೆಗೆಯಲಾಗಿರುತ್ತದೆ. ಸದರಿ ಬಟ್ಟೆಗಳನ್ನು ಬಿಳಿ ಬಟ್ಟೆಗಳಲ್ಲಿ ಪ್ರತ್ಯೇಕ–ಪ್ರತ್ಯೇಕವಾಗಿ ಸುತ್ತಿ, ಹೊಲೆದು, ಸೀಲು ಮಾಡಿ, ನಿಪಿ–5 ರಡಿ ವಶಕ್ಕೆ ಪಡೆದೆನು. ನಿಪಿ–5(ಡಿ) ತನ್ನ ಸಹಿ ಆಗಿರುತ್ತದೆ. ಎಂದು ಗುರುತಿಸಲಾಯಿತು. ಮು.ಮಾ–1, 2 ಹಾಗೂ 6 ಬಟ್ಟೆಗಳನ್ನು ತಾನು ನಿಪಿ–5 ರಡಿ ವಶಪಡಿಸಿದ್ದೆ. ನಿಪಿ–5 ರ ಸಂದರ್ಭ ನಿಪಿ–6 ರಂತೆ 3 ಫೋಟೊಗಳನ್ನು ತೆಗೆಯಲಾಗಿತ್ತು. ನಿಪಿ–5 ಮಹಜರ್ ನ್ನು ಬೆಳಿಗ್ಗೆ 10.00 ಗಂಟೆಯಿಂದ 11.00 ಗಂಟೆಯವರೆಗೆ ಚಾಸಾ–20 ರವರ ಮೂಲಕ ಬರೆಸಲಾಯಿತು. ನಿಪಿ–5 ರ ಸಮಯದಲ್ಲಿ ಪ್ರಾಸಾ–14 ರವರ ಮೂಲಕ ಫೋಟೊ ಹಾಗೂ ವಿಡಿಯೋ ಚಿತ್ರೀಕರಣ ಮಾಡಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 59** –ಪ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಪ್ರಾಸಾ–2 ರವರ ರಕ್ತದ ಮಾದರಿಯನ್ನು ಪರೀಕ್ಷಿಸಿ ವರದಿ ನೀಡುವಂತೆ ಪ್ರಾಸಾ–2 ರವರನ್ನು ಸಿಬ್ಬಂದಿಯ

ಮೂಲಕ ಕೋರಿಕೆ ಪತ್ರದೊಂದಿಗೆ ಸಿದ್ಧಾಪುರ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟೆನು. ನಿಪಿ–5 ರಡಿ ವಶಪಡಿಸಿಕೊಂಡ ಸ್ವತ್ತುಗಳನ್ನು ಮಾಲುಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 60** –ಪ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಪ್ರಾಸಾ–14 ರವರು ತನಿಖಾ ಸಂದರ್ಭ ತೆಗೆದ ಫೋಟೋಗಳನ್ನು ಮತ್ತು ವಿಡಿಯೋಗಳು ಇರುವ ನಿಪಿ–4 ಸಿಡಿಯನ್ನು ನಿಪಿ–15 ದೃಢೀಕರಣ ಪತ್ರದೊಂದಿಗೆ ನೀಡಿದ್ದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿದೆನು. ನಿಪಿ–15(ಬಿ) ತನ್ನ ಸಹಿ ಆಗಿರುತ್ತದೆ. ನಂತರ ಅದೇ ದಿನ ಪ್ರಾಸಾ–2 ರಿಂದ ಪ್ರಾಸಾ–6 ಹಾಗೂ ಚಾಸಾ–5 ರವರ ರ ಹೇಳಿಕೆಗಳನ್ನು ದಾಖಲಿಸಿದೆನು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 61** –ಪ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಆರೋಪಿತರ ಪತ್ತೆಯ ಬಗ್ಗೆ ಸಿಬ್ಬಂದಿಗಳನ್ನು ನೇಮಿಸಿದೆನು. ದಿನಾಂಕ 07–10–2022 ರಂದು ಕೃತ್ಯ ಸ್ಥಳವಾದ ಎಂ.ಎಸ್.ಟಿ. ಹೋಟೆಲ್ ಇರುವ ಬಗ್ಗೆ ದೃಢಪತ್ರ ನೀಡುವಂತೆ ಹೊಸ್ಕೇರಿ ಗ್ರಾಮ ಪಂಚಾಯ್ತಿಗೆ ಮನವಿ ಪತ್ರವನ್ನು ಕಳುಹಿಸಿಕೊಟ್ಟೆನು. ನಂತರ ಚಿಕಿತ್ಸೆಯ ಸಲುವಾಗಿ ಮಂಗಳೂರಿನ ಕೆ.ಎಂ.ಸಿ ಆಸ್ಪತ್ರೆಗೆ ದಾಖಲಾಗಿದ್ದ ಪ್ರಾಸಾ–1 ರವರ ರಕ್ತದ ಗುಂಪಿನ ಬಗ್ಗೆ ದೃಢೀಕರಣ ಪತ್ರವನ್ನು ನೀಡುವಂತೆ ಮನವಿ ಪತ್ರವನ್ನು ಕಳುಹಿಸಿದ್ದು, ಸದರಿ ಕೆ.ಎಂ.ಸಿ ಆಸ್ಪತ್ರೆಯವರು ನಿಪಿ–21 ರಂತೆ ಪ್ರಾಸಾ–1 ರವರ ರಕ್ತದ ಗುಂಪಿನ ಬಗ್ಗೆ ದೃಢೀಕರಣ ಪತ್ರವನ್ನು ನೀಡಿರುತ್ತಾರೆ. ನಿಪಿ–21(ಬಿ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 62** –ಫ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 09–10–2022 ರಂದು ಈ ಪ್ರಕರಣದ 1 ಹಾಗೂ 3ನೇ ಆರೋಪಿಗಳನ್ನು ಫ್ರಾಸಾ–13 ಹಾಗೂ 15 ಹಾಗೂ ಚಾಸಾ–17 ರವರು ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲದಲ್ಲಿ ವಶಕ್ಕೆ ಪಡೆದು ಠಾಣೆಯಲ್ಲಿ ಬೆಳಿಗ್ಗೆ 8.00 ಗಂಟೆಗೆ ನಿಪಿ–16 ವರದಿಯೊಂದಿಗೆ ತನ್ನ ಮುಂದೆ ಹಾಜರುಪಡಿಸಿದರು. ತಾನು 1 ಹಾಗೂ 3ನೇ ಆರೋಪಿಗಳನ್ನು ದಸ್ತಗಿರಿ ಮಾಡಿ, ಅವರ ಸ್ವ–ಇಚ್ಛಾ ಹೇಳಿಕೆಗಳನ್ನು ಪಂಚರಾದ ಫ್ರಾಸಾ–7 ಹಾಗೂ ಫ್ರಾಸಾ–8 ರವರ ಸಮಕ್ಷಮ ದಾಖಲಿಸಿಕೊಂಡೆನು. 1 ಆರೋಪಿ ನಿಪಿ–29 ರಂತೆ ನೀಡಿದ ತನ್ನ ಸ್ವ–ಇಚ್ಛಾ ಹೇಳಿಕೆಯಲ್ಲಿ "ಕೃತ್ಯಕ್ಕೆ ಉಪಯೋಗಿಸಿದ್ದ ಮೂರು ಕತ್ತಿಗಳನ್ನು ಹಾಗೂ ಕೃತ್ಯದ ಸಮಯದಲ್ಲಿ ತಾನು ಧರಿಸಿದ್ದ ಬಟ್ಟೆಗಳನ್ನು ತನ್ನ ವಾಸದ ಮನೆಯ ಹಿಂಭಾಗದ ಗೋಡೆಯ ಒತ್ತಿನಲ್ಲಿ ಇಟ್ಟಿದ್ದು, ತನ್ನನ್ನು ಕರೆದುಕೊಂಡು ಹೋದರೆ ತೆಗೆದುಕೊಡುತ್ತೇನೆ" ಎಂದು ಹೇಳಿರುತ್ತಾನೆ. ನಿಪಿ–29(ಎ) ತನ್ನ ಸಹಿ ಆಗಿರುತ್ತದೆ ಮತ್ತು ನಿಪಿ–29 ರಲ್ಲಿ ಇರುವ ನಿಪಿ–29(ಬಿ) 1ನೇ ಆರೋಪಿಯ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 63** –ಫ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ 3ನೇ ಆರೋಪಿ ನಿಪಿ–30 ರಂತೆ ನೀಡಿದ ತನ್ನ ಸ್ವ–ಇಚ್ಛಾ ಹೇಳಿಕೆಯಲ್ಲಿ "ಕೃತ್ಯಕ್ಕೆ ಉಪಯೋಗಿಸಿದ್ದ ಮೂರು ಕತ್ತಿಗಳನ್ನು ಹಾಗೂ ಕೃತ್ಯದ ಸಮಯದಲ್ಲಿ ತಾನು ಧರಿಸಿದ್ದ ಬಟ್ಟೆಗಳನ್ನು ತನ್ನ ವಾಸದ ಮನೆಯ ಹಿಂಭಾಗದ ಗೋಡೆಯ ಒತ್ತಿನಲ್ಲಿ ಇಟ್ಟಿದ್ದು, ತನ್ನನ್ನು ಕರೆದುಕೊಂಡು ಹೋದರೆ ತೆಗೆದುಕೊಡುತ್ತೇನೆ" ಎಂದು ಹೇಳಿರುತ್ತಾನೆ ಎಂದು ನುಡಿದಿರುತ್ತಾರೆ. ನಿಪಿ–30(ಎ) ತನ್ನ ಸಹಿ ಆಗಿರುತ್ತದೆ ಮತ್ತು ನಿಪಿ–30 ರಲ್ಲಿ ಇರುವ ನಿಪಿ–30(ಬಿ) ಸಹಿ 3ನೇ ಆರೋಪಿಯ ಸಹಿಯಾಗಿರುತ್ತದೆ ಎಂದು ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 64** –ಫ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ನಂತರ 1 ಮತ್ತು 3ನೇ ಆರೋಪಿತರು ದಾರಿ ತೋರಿಸಿದ ಮೇರೆಗೆ ತಾನು, ಪಂಚರು ಮತ್ತು ಸಿಬ್ಬಂದಿಗಳು ಇಲಾಖಾ

ಜೀಪಿನಲ್ಲಿ ಅರೆಕಾಡುವಿಗೆ ಹೋಗಿದ್ದು, ಅಲ್ಲಿ 1 ಮತ್ತು 3ನೇ ಆರೋಪಿತರು ಹೇಳಿದ ಸ್ಥಳದಲ್ಲಿ ಜೀಪಿನ್ನು ನಿಲ್ಲಿಸಿದ ನಂತರ 1 ಮತ್ತು 3ನೇ ಆರೋಪಿತರು ತಾವು ಮುಂದಾಗಿ ಹೋಗಿ ತಮ್ಮ ವಾಸದ ಮನೆಯನ್ನು ತೋರಿಸಿಕೊಟ್ಟು ತಮ್ಮನ್ನು ಅವರ ವಾಸದ ಮನೆಯ ಹಿಂಭಾಗಕ್ಕೆ ಕರೆದುಕೊಂಡು ಹೋಗಿ ಹಿಂಭಾಗದ ಗೋಡೆಯ ಬದಿಯಲ್ಲಿ ಸುತ್ತಿಟ್ಟಿದ್ದ ಮು.ಮಾ–10 ರಿಂದ 13 ಬಟ್ಟೆಗಳನ್ನು ತನ್ನ ಮುಂದೆ ಹಾಜರುಪಡಿಸಿ ಅದೇ ಬಟ್ಟೆಗಳನ್ನು ಘಟನಾ ದಿನಾಂಕ ತಾವು ಧರಿಸಿದ್ದಾಗಿ ಹೇಳಿದರು ಮತ್ತು ಅವುಗಳನ್ನು ಪ್ರತ್ಯೇಕ–ಪ್ರತ್ಯೇಕವಾಗಿ ಬಿಳಿ ಚೀಲಕ್ಕೆ ಹಾಕಿ, ಹೊಲೆದು, ಸೀಲು ಮಾಡಿ ವಶಕ್ಕೆ ಪಡೆದೆನು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 65** –ಫ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಅದೇ ಸ್ಥಳದಲ್ಲಿ ಇಟ್ಟಿದ್ದ ಮು.ಮಾ–3 ರಿಂದ 5 ಮೂರು ಕತ್ತಿಗಳನ್ನು 1 ಮತ್ತು 3ನೇ ಆರೋಪಿತರು ತನ್ನ ಸಮಕ್ಷಮ ಹಾಜರುಪಡಿಸಿ, ಅವುಗಳನ್ನು ಕೃತ್ಯಕ್ಕೆ ಉಪಯೋಗಿಸಿದ್ದಾಗಿ ಹೇಳಿದ್ದರು. ಮು.ಮಾ–3 ರಿಂದ 5 ನ್ನು ಮೇಲೆ ಹೇಳಿದಂತೆ ಪ್ರತ್ಯೇಕ–ಪ್ರತ್ಯೇಕವಾಗಿ ಬಿಳಿ ಚೀಲಕ್ಕೆ ಹಾಕಿ, ಹೊಲೆದು, ಸೀಲು ಮಾಡಿ ವಶಕ್ಕೆ ಪಡೆದಿದ್ದೆ. ಮು.ಮಾ–3 ರಿಂದ 5 ಹಾಗೂ ಮು.ಮಾ–10 ರಿಂದ 13 ರನ್ನು ತಾನು ನಿಪಿ–8 ಮಹಜರ್ ನಡಿ ಬೆಳಿಗ್ಗೆ 11.15 ರಿಂದ 12.15 ರ ಸಮಯದಲ್ಲಿ ವಶಕ್ಕೆ ಪಡೆದಿದ್ದೆ. ನಿಪಿ–8(ಸಿ) ತನ್ನ ಸಹಿ ಆಗಿರುತ್ತದೆ. ನಿಪಿ–8 ನ್ನು ಚಾಸಾ–20 ರವರು ಬರೆದಿದ್ದರು. ನಿಪಿ–8 ರ ಸಂದರ್ಭ ಫ್ರಾಸಾ–13 ರವರ ಮೂಲಕ ಫೋಟೊ ತೆಗೆಸಿರುತ್ತೇನೆ ಮತ್ತು ವಿಡಿಯೋ ಚಿತ್ರೀಕರಣ ಮಾಡಿಸಿರುತ್ತೇನೆ. ಆ ಸಂದರ್ಭ ನಿಪಿ–9 ರಂತೆ 3 ಫೋಟೊಗಳನ್ನು ತೆಗೆಸಿರುತ್ತೇನೆ. ನಿಪಿ–10 DVD ಯಲ್ಲಿ ಇರುವ ದೃಶ್ಯಾವಳಿಗಳನ್ನು ನಿಪಿ–8 ರ ಸಮಯದಲ್ಲಿ ಚಿತ್ರೀಕರಣ ಮಾಡಲಾಗಿತ್ತು ಎಂದು ನುಡಿದಿರುತ್ತಾರೆ ಮತ್ತು ಮು.ಮಾ–3 ರಿಂದ 5 ಹಾಗೂ ಮು.ಮಾ–10 ರಿಂದ 13 ರನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 66** –ಫ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಆರೋಪಿತರು ಹಾಗೂ ಸ್ವತ್ತಿನೊಂದಿಗೆ ಠಾಣೆಗೆ ಆಗಮಿಸಿ ವಶಪಸಿಕೊಂಡ ಸ್ವತ್ತುಗಳನ್ನು ಠಾಣಾ ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು. ನಂತರ 1 ಹಾಗೂ 3ನೇ ಆರೋಪಿತರನ್ನು ಅವರ ರಕ್ತದ ಗುಂಪನ್ನು ಪರೀಕ್ಷಿಸಿ ವರದಿ ನೀಡುವಂತೆ ಕೋರಿಕೆ ಪತ್ರದೊಂದಿಗೆ ಸಿಬ್ಬಂದಿಗಳೊಂದಿಗೆ ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿಕೊಟ್ಟೆನು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 67** –ಫ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ನಂತರ ತನಿಖಾ ಸಂದರ್ಭ ವಶಪಡಿಸಿಕೊಂಡಿದ್ದ ಮು.ಮಾ–1, 2, 6, 7 ಹಾಗೂ 8 ನ್ನು ಠಾಣಾ ಸಿಬ್ಬಂದಿಯಾದ ಕೃಷ್ಣಮೂರ್ತಿ ರವರ ಮೂಲಕ ಮೈಸೂರಿನ RFSL ಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಅದೇ ದಿನ ಫ್ರಾಸಾ–7, 8 ಹಾಗೂ ಚಾಸಾ–17 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡೆನು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 68** –ಫ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 10–10–2022 ರಂದು ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಜೀಪನ್ನು ಪರೀಕ್ಷಿಸಿ ವರದಿ ನೀಡುವಂತೆ ಹಾಗೂ ನಷ್ಟದ ಅಂದಾಜು ಮೌಲ್ಯವನ್ನು ನಿರ್ಧರಿಸಿ ದೃಢೀಕರಣ ಪತ್ರ ನೀಡುವಂತೆ ಚಾಸಾ–23 ರವರಿಗೆ ಮನವಿ ಪತ್ರವನ್ನು ಕಳುಹಿಸಿಕೊಟ್ಟೆನು. ನಂತರ ದಿನಾಂಕ 11–10–2022 ರಂದು ಮೈಸೂರಿನ RFSL ಕಛೇರಿಯವರು ಈ ಪ್ರಕರಣದ ಸ್ವತ್ತುಗಳನ್ನು ಪರೀಕ್ಷೆಗಾಗಿ ಸ್ವೀಕರಿಸಿದ ಬಗ್ಗೆ ನೀಡಿದ ಸ್ವೀಕೃತಿಯನ್ನು ಪಡೆದುಕೊಂಡಿರುತ್ತೇನೆ ಮತ್ತು ಫ್ರಾಸಾ–11 ರವರನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 69** –ಫ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 12–10–2022 ರಂದು ಮು.ಮಾ–3 ರಿಂದ 5 ನ್ನು ಪರೀಕ್ಷಿಸಿ ಅಭಿಪ್ರಾಯ ವರದಿ ನೀಡುವಂತೆ ಕೋರಿ ಸಿದ್ಧಾಪುರ ಸರ್ಕಾರಿ ಆಸ್ಪತ್ರೆಯ ವೈದ್ಯರಾದ ಫ್ರಾಸಾ–19 ರವರಿಗೆ ಮನವಿ ಪತ್ರವನ್ನು ಮು.ಮಾ–3 ರಿಂದ 5 ರೊಂದಿಗೆ ಕಳುಹಿಸಿಕೊಟ್ಟೆನು. ಅದೇ ದಿನ ಫ್ರಾಸಾ–19 ರವರು ಮು.ಮಾ–3 ರಿಂದ 5 ನ್ನು ಪರೀಕ್ಷಿಸಿ ನಿಪಿ–24 ರಂತೆ ಅಭಿಪ್ರಾಯ ನೀಡಿದ್ದನ್ನು ಸ್ವೀಕರಿಸಿರುತ್ತೇನೆ. ನಿಪಿ–24(ಬಿ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ 70** –ಫ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 14–10–2022 ರಂದು ಮೈಸೂರಿನ ವಿಧಿ ವಿಜ್ಞಾನ ಪ್ರಯೋಗ ಶಾಲೆಯಿಂದ ಕಳುಹಿಸಿಕೊಟ್ಟ ನಿಪಿ–19 ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿದೆನು. ನಿಪಿ–19(ಎ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ 71** –ಫ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 20–10–2022 ರಂದು ಮು.ಮಾ–3 ರಿಂದ 5 ಹಾಗೂ ಮು.ಮಾ–10 ರಿಂದ 13 ನ್ನು ಪರೀಕ್ಷಿಸಿ ವರದಿ ನೀಡುವಂತೆ ಮನವಿ ಪತ್ರದೊಂದಿಗೆ ಫ್ರಾಸಾ–12 ರವರ ಮೂಲಕ ಮೈಸೂರಿನ RFSL ಕಛೇರಿಗೆ ಕಳುಹಿಸಿಕೊಟ್ಟೆನು. ದಿನಾಂಕ 22–10–2022 ರಂದು RFSL ಮೈಸೂರಿನವರು ನೀಡಿದ ಸ್ವೀಕೃತಿ ಪತ್ರವನ್ನು ಫ್ರಾಸಾ–12 ರವರು ತಂದು ಹಾಜರುಡಿಸಿದ್ದನ್ನು ಸ್ವೀಕರಿಸಿ, ಫ್ರಾಸಾ–12 ರವರ ಹೇಳಿಕೆಯನ್ನು ದಾಖಲಿಸಿದೆನು. ದಿನಾಂಕ 24–10–2022 ರಂದು ಫ್ರಾಸಾ–19 ರವರು ನೀಡಿದ ಫ್ರಾಸಾ–2 ರವರ ನಿಪಿ–23 ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿದೆನು. ನಿಪಿ–23(ಬಿ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 72** –ಫ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 02–11–2022 ರಂದು ಮೈಸೂರಿನ ವಿಧಿ ವಿಜ್ಞಾನ ಪ್ರಯೋಗ ಶಾಲೆಯಿಂದ ಕಳುಹಿಸಿಕೊಟ್ಟ ನಿಪಿ–20 ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿದೆನು. ನಿಪಿ–20(ಎ) ತನ್ನ ಸಹಿ ಆಗಿರುತ್ತದೆ.

ದಿನಾಂಕ 04–11–2022 ರಂದು ಚಾಸಾ–22 ರವರು ಕಳುಹಿಸಿಕೊಟ್ಟ ನಿಪಿ–27 ನ್ನು ಸ್ವೀಕರಿಸಿದೆನು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 73** –ಫ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 04–11–2022 ರಂದು ಮಂಗಳೂರಿನ ಕೆ.ಎಂ.ಸಿ ಆಸ್ಪತ್ರೆಯಿಂದ ಫ್ರಾಸಾ–1 ರವರ ಗಾಯದ ಪ್ರಮಾಣ ಪತ್ರವನ್ನು ನಿಪಿ–17 ಮತ್ತು ನಿಪಿ–18 X–ray ವರದಿಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿದೆನು. ನಿಪಿ–17(ಬಿ) ತನ್ನ ಸಹಿ ಆಗಿರುತ್ತದೆ. ನಂತರ ಅದೇ ದಿನ ಮಡಿಕೇರಿ ಜಿಲ್ಲಾ ಆಸ್ಪತ್ರೆಯವರು ಫ್ರಾಸಾ–1 ರವರಿಗೆ ನೀಡಿದ ನಿಪಿ–31 ಡಿಸ್‌ಚಾರ್ಜ್ ಸಮ್ಮರಿಯನ್ನು ಪಡೆದುಕೊಂಡಿರುತ್ತೇನೆ. ನಿಪಿ–31(ಎ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 74** –ಫ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 05–11–2022 ರಂದು ಈ ಪ್ರಕರಣದ 2ನೇ ಆರೋಪಿ ತನ್ನ ಮುಂದೆ ಠಾಣೆಯಲ್ಲಿ ಹಾಜರಾಗಿದ್ದು, ಆತನನ್ನು ವಿಚಾರಿಸಿ ಆತನ ಸ್ವ–ಇಚ್ಛಾ ಹೇಳಿಕೆಯನ್ನು ಪಡೆದೆನು. 2ನೇ ಆರೋಪಿಯು ತನ್ನ ಸ್ವ–ಇಚ್ಛಾ ಹೇಳಿಕೆಯಲ್ಲಿ ಕೃತ್ಯ ಸಮಯದಲ್ಲಿ ತಾನು ಧರಿಸಿದ್ದ ಬಟ್ಟೆಗಳನ್ನು ತನ್ನ ವಾಸದ ಮನೆಯ ಕಾಂಪೌಂಡಿನ ಒತ್ತಿನಲ್ಲಿ ಇರುವ ತನ್ನ ಕಾಫಿ ತೋಟದಲ್ಲಿ ಇದ್ದ ಒಂದು ಪಾಣಿವಾಳ ಮರದಲ್ಲಿ ಇಟ್ಟಿರುವುದಾಗಿ ಮತ್ತು ತನ್ನೊಂದಿಗೆ ಬಂದಿಲ್ಲಿ ತೋರಿಸಿಕೊಡುವುದಾಗಿ ಎಂದು ಹೇಳಿರುತ್ತಾನೆ. ನಂತರ 2ನೇ ಆರೋಪಿಯು ತಮ್ಮನ್ನು ಅರೆಕಾಡು ಗ್ರಾಮದಲ್ಲಿ ಇರುವ

ಆತನ ವಾಸದ ಮನೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿಗೆ ಪಂಚರಾದ ಪ್ರಾಸಾ–9 ಹಾಗೂ ಪ್ರಾಸಾ–10 ರವರನ್ನು ತಾನು ಕರೆಸಿ ಅವರಿಗೆ ಪಂಚರಾಗಿ ಸಹಕರಿಸುವಂತೆ ಕೋರಿದ ಮೇರೆಗೆ ಅವರುಗಳು ಒಪ್ಪಿಕೊಂಡರು. ನಂತರ 2ನೇ ಆರೋಪಿ ತಮ್ಮನ್ನು ತನ್ನ ತೋಟದಲ್ಲಿ ಇರುವ ಪಾಣಿವಾಳ ಮರವನ್ನು ತೋರಿಸಿಕೊಟ್ಟಿದ್ದು, ಅದನ್ನು ಪರಿಶೀಲಿಸಲಾಗಿ ಅದರಲ್ಲಿ ಯಾವುದೇ ಬಟ್ಟೆಗಳು ಕಂಡು ಬಂದಿರಲಿಲ್ಲ. ಆ ಸಂದರ್ಭ ನಿಪಿ–11 ರಂತೆ ಸಂಜೆ 5.00 ಗಂಟೆಯಿಂದ 5.45 ರ ವರೆಗೆ ಪಂಚನಾಮ ಕ್ರಮವನ್ನು ಜರುಗಿಸಿದೆನು. ನಿಪಿ–11(ಡಿ) ತನ್ನ ಸಹಿ ಆಗಿರುತ್ತದೆ. ಆ ಸಂದರ್ಭ ಪ್ರಾಸಾ–15 ರವರ ಮೂಲಕ ಫೋಟೊ ತೆಗೆಸಲಾಯಿತು ಹಾಗೂ ವಿಡಿಯೋ ಚಿತ್ರೀಕರಣವನ್ನು ಮಾಡಲಾಯಿತು. ಆ ಸಂದರ್ಭ ನಿಪಿ–12 ಫೋಟೋವನ್ನು ತೆಗೆಯಲಾಗಿತ್ತು ಮತ್ತು ನಿಪಿ–13 ಸಿಡಿಯಲ್ಲಿ ಇರುವ ದೃಶ್ಯಾವಳಿಗಳನ್ನು ಚಿತ್ರೀಕರಣ ಮಾಡಲಾಗಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 75** –ಪ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ನಂತರ 2ನೇ ಆರೋಪಿಯೊಂದಿಗೆ ಠಾಣೆಗೆ ಹಿಂತಿರುಗಿರುತ್ತೇನೆ. ಠಾಣೆಯಲ್ಲಿ ಪ್ರಾಸಾ–15 ರವರು ಫೋಟೊ ಹಾಗೂ ವಿಡಿಯೋಗಳನ್ನು ಪ್ರಿಂಟ್ ಹಾಕಿಸಿ ನೀಡಿದ ಬಗ್ಗೆ ನಿಪಿ–14 ರಂತೆ ಭಾರತೀಯ ಸಾಕ್ಷ್ಯಾಧಿನಿಯಮ 65(ಬಿ) ರಡಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ನಿಪಿ–14(ಬಿ) ತನ್ನ ಸಹಿ ಆಗಿರುತ್ತದೆ. ನಂತರ ಅದೇ ದಿನ ಪ್ರಾಸಾ–9, 10, 13, 15, ಚಾಸಾ–16 ಹಾಗೂ 20 ರವರ ಹೇಳಿಕೆಗಳನ್ನು ದಾಖಲಿಸಿದೆನು. ನಂತರ ಅದೇ ದಿನ 2ನೇ ಆರೋಪಿಯ ರಕ್ತದ ಗುಂಪನ್ನು ಪರೀಕ್ಷಿಸಿ ವರದಿ ನೀಡುವಂತೆ ಸಿದ್ದಾಪುರ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಯವರಿಗೆ ನಿಪಿ–26 ಮನವಿ ಪತ್ರದೊಂದಿಗೆ 2ನೇ ಆರೋಪಿಯನ್ನು ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ 2ನೇ ಆರೋಪಿಯ ರಕ್ತದ ಗುಂಪನ್ನು ಪರೀಕ್ಷಿಸಿ ವೈದ್ಯರು ನಿಪಿ–26 ರಲ್ಲಿ ಆತನ ರಕ್ತದ ಗುಂಪು ‘B' positive ಆಗಿರುತ್ತದೆ ಎಂದು ಹಿಂಬರಹವನ್ನು ನೀಡಿರುತ್ತಾರೆ. ನಿಪಿ–26(ಬಿ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 76** –ಫ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 10–11–2022 ರಂದು ಫ್ರಾಸಾ–1 ರವರ ಗಾಯದ ಪ್ರಮಾಣ ಪತ್ರವನ್ನು ಫ್ರಾಸಾ–19 ರವರು ನಿಪಿ–22 ರಂತೆ ನೀಡಿದ್ದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿದೆನು. ನಿಪಿ–22(ಬಿ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ 77** –ಫ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 21–11–2022 ರಂದು ಚಾಸಾ–19 ರವರ ಹೇಳಿಕೆಯನ್ನು ಪಡೆದೆನು ಮತ್ತು ದಿನಾಂಕ 22–11–2022 ರಂದು ಜೀಪನ್ನು ಪರಿಶೀಲಿಸಿ ನಷ್ಟವನ್ನು ಅಂದಾಜಿಸಿ ಚಾಸಾ–23 ರವರು ನೀಡಿದ ನಿಪಿ–32 ವರದಿಯನ್ನು ಸ್ವೀಕರಿಸಿ ಕಡತ್ಕೆ ಅಳವಡಿಸಿದೆನು. ನಿಪಿ–32(ಎ) ತನ್ನ ಸಹಿ ಆಗಿರುತ್ತದೆ. ನಿಪಿ–32 ರಲ್ಲಿ ಜಖಂಗೊಂಡ ಜೀಪಿನ ಮುಂಭಾಗದ ಗ್ಲಾಸಿನ ಅಂದಾಜು ಮಾರುಕಟ್ಟೆ ಮೌಲ್ಯ ರೂ.4,869/- ಇರುತ್ತದೆ ಎಂಬುದಾಗಿ ಚಾಸಾ–23 ರವರು ನಮೂದಿಸಿರುತ್ತಾರೆ. ನಿಪಿ–33 ಮತ್ತು ನಿಪಿ–34 ವರದಿಗಳು 1 ಹಾಗೂ 3ನೇ ಆರೋಪಿಯ ರಕ್ತದ ಗುಂಪಿನ ವರದಿ ಆಗಿರುತ್ತವೆ ಎಂದು ನುಡಿದಿರುತ್ತಾರೆ. ನಿಪಿ–33(ಎ) ಮತ್ತು ನಿಪಿ–34(ಎ) ತನ್ನ ಸಹಿಗಳು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ 78** –ಫ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ನಂತರ ದಿನಾಂಕ 23–11–2022 ರಂದು ತನಿಖೆಯನ್ನು ಮುಕ್ತಾಯಗೊಳಿಸಿ ತನಿಖೆಯಲ್ಲಿ ಆರೋಪಿಗಳು ಕೃತ್ಯ ಎಸಗಿರುವುದು ಕಂಡು ಬಂದಿರುವುದರಿಂದ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದೆನು. ಫ್ರಾಸಾ–4 ರವರ ನಿಪಿ–7 ರಂತೆ ತನ್ನ ಮುಂದೆ ಹೇಳಿಕೆ ನೀಡಿರುತ್ತಾರೆ. ತಾನು ದಸ್ತಗಿರಿ ಮಾಡಿದ ಆರೋಪಿಗಳ ಪೈಕಿ 1 ಮತ್ತು 3ನೇ ಆರೋಪಿತರು ನ್ಯಾಯಾಲಯದಲ್ಲಿ ಹಾಜರಿರುತ್ತಾರೆ ಎಂದು ನುಡಿದಿರುತ್ತಾರೆ. 2ನೇ

ಆರೋಪಿ ಸಾಕ್ಷಿಯ ಸಾಕ್ಷ್ಯ ಸಮಯ ಗೈರು ಹಾಜರಿದ್ದು, 2ನೇ ಆರೋಪಿಯ ಗುರುತಿಸುವಿಕೆಯ ಬಗ್ಗೆ ತರಕಾರು ಇಲ್ಲ ಎಂದು 2ನೇ ಆರೋಪಿ ಪರ ವಕೀಲರು ಹೇಳಿದ ಕಾರಣ ಗುರುತಿಸಲಾಗಿದೆ ಎಂದು ಪರಿಗಣಿಸಲಾಯಿತು. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 79** –ಫ್ರಾಸಾ–21 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ನಿಪಿ–4, ನಿಪಿ–10 ಹಾಗೂ ನಿಪಿ–13 ಸಿಡಿಗಳನ್ನು ನ್ಯಾಯಾಲಯದಲ್ಲಿ ಪ್ರದರ್ಶಿಸಲಾಗಿ ನಿಪಿ–4 ರಲ್ಲಿ ಇರುವ ಒಟ್ಟು 19 ಫೋಟೊಗಳನ್ನು ನೋಡಿ ಗುರುತಿಸಿರುತ್ತಾರೆ ಮತ್ತು ನಿಪಿ–10 ರಲ್ಲಿ ಇರುವ ಒಟ್ಟು 5 ಫೋಟೋಗಳನ್ನು ಮತ್ತು ಒಂದು ವಿಡಿಯೋವನ್ನು ನೋಡಿ ನಿಪಿ–8 ಮಹಜರ್ ನ ಸಂದರ್ಭ ಅವುಗಳನ್ನು ತೆಗೆಯಲಾಗಿತ್ತು ಮತ್ತು ಮಾಡಲಾಗಿತ್ತು ಎಂದು ನುಡಿದಿರುತ್ತಾರೆ. ನಿಪಿ–13 ರಲ್ಲಿ ಇರುವ ವಿಡಿಯೋವನ್ನು ಪ್ಲೇ ಮಾಡಿದಾಗ ಸಾಕ್ಷಿ ಅದನ್ನು ನೋಡಿ ನಿಪಿ–11 ರ ಸಮಯ ಅದನ್ನು ಚಿತ್ರೀಕರಣ ಮಾಡಲಾಗಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 80 –** ನಿನ್ನ ಪರವಾಗಿ ಏನಾದರೂ ಹೇಳುವುದು ಇದೆಯೆ?

ಉಃ 2019 ನೇ ಇಸವಿಯಲ್ಲಿ ಫ್ರಾಸಾ–1 ಯಶೋಧರ ನನ್ನ ಮನೆಗೆ ಬಂದು ನನಗೆ ಮಾರಣಾಂತಿಕ ಹಲ್ಲೆ ಮಾಡಿ ನನಗೆ ಗಾಯ ಪಡಿಸಿದ್ದು, ಆ ಬಗ್ಗೆ ನಾನು ದೂರು ನೀಡಿದ ಮೇರೆಗೆ ಪ್ರಕರಣ ದಾಖಲಾಗಿ ಸದರಿ ಪ್ರಕರಣ ಈಗ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮಡಿಕೇರಿಯಲ್ಲಿ ಎಸ್.ಸಿ ನಂಬರ್ 103/2019 ರಲ್ಲಿ ವಿಚಾರಣೆಗೆ ಬಾಕಿ ಇರುತ್ತದೆ. ಸದರಿ ಕೇಸಿನಲ್ಲಿ ರಾಜಿ ಮಾಡುವಂತೆ ಫ್ರಾಸಾ–1 ನನ್ನ ವಕೀಲರಿಗೆ ಕೋರಿದ್ದು, ಸದರಿ ವಿಷಯವನ್ನು ನನ್ನ ವಕೀಲರು ನನಗೆ ತಿಳಿಸಿದ್ದರು. ಸದರಿ ಕೇಸಿನಲ್ಲಿ ರಾಜಿ ಆದರೆ ಹಣ ಕೊಡಿಸುವುದಾಗಿ ಸಹ ಫ್ರಾಸಾ–1 ರವರು ಬೇರೆಯವರ ಮೂಲಕ ನನಗೆ ಆಮಿಷ ಒಡ್ಡಿದ್ದರು. ನಾನು ಸದರಿ ಎಸ್.ಸಿ ನಂಬರ್ 103/2019 ರಲ್ಲಿ

ರಾಜಿ ಆಗಲು ಒಪ್ಪದ ಕಾರಣ ಫ್ರಾಸಾ–1 ರವರು ಅವರ ವಾಹನವನ್ನು ನನ್ನ ವಾಹನಕ್ಕೆ ಅಡ್ಡಲಾಗಿ ನಿಲ್ಲಿಸುವುದು ಮುಂತಾದ ತೊಂದರೆಯನ್ನು ನೀಡಿದ್ದಲ್ಲದೆ ನನ್ನ ಮೇಲೆ ಮತ್ತು ಸದರಿ ಎಸ್.ಸಿ ನಂಬರ್ 103/2019 ರಲ್ಲಿ ಪ್ರತ್ಯಕ್ಷ ಸಾಕ್ಷಿಯಾದ ನನ್ನ ಅಣ್ಣನಾದ 3 ನೇ ಆರೋಪಿ ಮತ್ತು ತಮ್ಮನಾದ 2 ನೇ ಆರೋಪಿಯ ಮೇಲೆ ಸುಳ್ಳು ದೂರನ್ನು ನೀಡಿ ಈ ಕೇಸು ದಾಖಲಿಸಿಕೊಂಡಿರುತ್ತಾರೆ. ಫ್ರಾಸಾ–1 ರವರು ಘಟನೆ ನಡೆಯಿತು ಎಂದು ಸುಳ್ಳು ಹೇಳಿದ ಅರೆಕಾಡುವಿನಲ್ಲಿ ಇರುವ MSD ಹೊಟೇಲ್ ನಲ್ಲಿ ಸಿ.ಸಿ ಕ್ಯಾಮರ ಅಳವಡಿಸಲಾಗಿದ್ದು, ಫ್ರಾಸಾ–1 ರವರು ಹೇಳಿದಂತಹ ಘಟನೆ ನಡೆಯದ ಕಾರಣ ಪೊಲೀಸರು ಸದರಿ ಸಿ.ಸಿ ಕ್ಯಾಮರದ footage ನ್ನು ಈ ಕೇಸಿನಲ್ಲಿ ವಶ ಪಡಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸಿದ್ದಾಪುರ ಠಾಣೆಯ ಪೊಲೀಸರು ದಿಃ 28–09–2022 ರ ಎರಡು–ಮೂರು ದಿನಗಳ ನಂತರ ವಿಚಾರಣೆಗಾಗಿ ಸಿದ್ದಾಪುರ ಪೊಲೀಸ್ ಠಾಣೆಗೆ ಬರುವಂತೆ ನನ್ನನ್ನು 3ನೇ ಆರೋಪಿಯನ್ನು ಕರೆದ ಮೇರೆಗೆ ನಾವು ಪೊಲೀಸ್ ಠಾಣೆಗೆ ಹೋಗಿದ್ದೆವು. ಆ ಸಂದರ್ಭ ಪೊಲೀಸರು ನಮ್ಮನ್ನು ಸುಳ್ಳು ಅರೋಪ ಮಾಡಿ ಈ ಕೇಸಿನಲ್ಲಿ ಬಂಧಿಸಿರುತ್ತಾರೆ.

ನನ್ನನ್ನು ಮತ್ತು 3ನೇ ಆರೋಪಿಯನ್ನು ಬಂಧಿಸಿದ ನಂತರ ಪೊಲೀಸರು ನಮ್ಮನ್ನು ಅರೆಕಾಡವಿನಲ್ಲಿರುವ ನಮ್ಮ ಮನೆಗೆ ಕರೆದುಕೊಂಡು ಹೋಗಿದ್ದು, ಆ ಸಂದರ್ಭ ಪೊಲೀಸರು ಪೊಲೀಸ್ ಜೀಪಿನಲ್ಲಿ ಎರಡು ಕತ್ತಿಗಳನ್ನು ತೆಗೆದು ನಮ್ಮ ಮನೆಯ ಪಕ್ಕದ ಬಸ್ ಸ್ಟಾಂಡ್ ನ ಹಿಂಬಧಿಯಲ್ಲಿ ಇಟ್ಟು ಅಲ್ಲಿಗೆ ಇಬ್ಬರನ್ನು ಕರೆಸಿ ಅವರ ಸಮಕ್ಷಮ ನಮ್ಮನ್ನು ಮತ್ತು ಸದರಿ ಇಬ್ಬರನ್ನು ನಿಲ್ಲಿಸಿ ಪೊಲೀಸರು ಫೋಟೋವನ್ನು ತೆಗೆದಿದ್ದರು. ಆದಕಾರಣ ನಿರಾಪರಾಧಿಯಾದ ನನ್ನನ್ನು, 2ನೇ ಆರೋಪಿಯನ್ನು ಮತ್ತು 3ನೇ ಆರೋಪಿಯನ್ನು ಬಿಡುಗಡೆ ಮಾಡಬೇಕೆಂದು ನ್ಯಾಯಾಲಯದಲ್ಲಿ ಪ್ರಾರ್ಥಿಸುತ್ತೇನೆ.

**ಪ್ರಃ 81 –** ನಿನ್ನ ಪರವಾಗಿ ಯಾರನ್ನಾದರೂ ಸಾಕ್ಷಿದಾರರನ್ನಾಗಿ ವಿಚಾರಣೆ ಮಾಡುವಿಯಾ?
ಉಃ ಇಲ್ಲ.

**ಸಿ.ಆರ್.ಪಿ.ಸಿ. ಕಲಂ 281ರಡಿಯಲ್ಲಿ ಧೃಡೀಕರಣ ಪತ್ರ**

ಸಾಕ್ಷ್ಯದಲ್ಲಿ ಆರೋಪಿಗಳ ವಿರುದ್ಧ ಕಂಡುಬಂದ ಅಂಶಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಪ್ರಶ್ನೆಗಳ ರೂಪದಲ್ಲಿ ರಚಿಸಿ, ಆರೋಪಿಗಳಿಗೆ ಓದಿ, ತಿಳಿಸಿ ಪ್ರಶ್ನಿಸಿ ಕೇಳಲಾಯಿತು. ಆರೋಪಿಗಳು ಸದರಿ ಪ್ರಶ್ನೆಗಳನ್ನು ತಿಳಿದುಕೊಂಡು ಉತ್ತರಿಸಿರುತ್ತಾನೆ. ಆತ ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ ಎಂದು ನಾನು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ 12-09-2025 ಸಹಿ/-xxx

**(ಪರಮೇಶ್ವರ ಪ್ರಸನ್ನ ಬಿ)**
1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು – ಮಡಿಕೇರಿ.